ಹಾವೇರಿಯಲ್ಲಿ ಶುಕ್ರವಾರ ನಡೆದ 'ಹಾವೇರಿ ಕೃಷಿ ಸಿರಿ ಚಿಂತನ–ಮಂಥನ ರೈತರ ಕಾರ್ಯಾಗಾರ'ದಲ್ಲಿ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ. ಮಾತನಾಡಿದರು

ಮುಖ್ಯಾಂಶಗಳು

- ಸಿರಿಧಾನ್ಯಗಳಲ್ಲಿ ಪೋಷಕಾಂಶ
- ಮಾರುಕಟ್ಟೆಯಲ್ಲಿ ಉತ್ತಮ ಬೆಲೆ
- ಪರಿಸರ ರಕ್ಷಣೆಗೆ ಸಾವಯವ ಕೃಷಿ ಪೂರಕ

ಲಂಬನೆ ಹೊಂದಬಹುದು' ಎಂದರು.

ಪದವಿ, ಸ್ನಾತಕೋತ್ತರ ಪದವಿ ಪಡೆದು ನಗರಕ್ಕೆ ವಲಸೆಹೋಗಿ ಸಣ್ಣ ಪುಟ್ಟ ಚಾಕರಿ ಮಾಡುವ ಬದಲು ಸಿರಿಧಾನ್ಯಗಳನ್ನು ಬೆಳೆದರೆ ಆರ್ಥಿಕವಾಗಿ ...

ಅನುಸಾರವಾಗಿ ಕೃಷಿ ಮಾಡಬೇಕು. ಸಿರಿಧಾನ್ಯಗಳನ್ನು ಬೆಳೆಯುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಜೂನ್ ತಿಂಗಳಿನಿಂದ ಕೃಷಿ ಸಿರಿ ಕಾರ್ಯಕ್ರಮ ಅನುಷ್ಠಾನ ...

ಗುರುವಾರ 31 ಮೇ 2018 • 31 MAY 2018
• VIJAYAVANI » HUBBALLI
2 | ಹಾವೇರಿ } ಲೋಕಲ್ ಎಕ್ಸ್‌ಪ್ರೆಸ್
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

ಕೃಷಿ ಮಿತ್ರ

ಮುಂಗಾರು ಪೂರ್ವ ಮಳೆ ರೈತರಿಗೆ ಮಾಹಿತಿ

ಮುಂಗಾರು ಪೂರ್ವ ಮಳೆಗಳ ಪ್ರಯೋಜನ ಪಡೆಯಲು ಹನುಮನಮಟ್ಟಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಅಶೋಕ ಪಿ. ಅವರು ರೈತರಿಗೆ ಕೆಲವು ಟಿಪ್ಸ್‌ಗಳನ್ನು ನೀಡಿದ್ದಾರೆ. ಮುಂಚಿತವಾಗಿ ಬಿತ್ತಬೇಕಾದ ಎಳ್ಳು, ನವಣೆ, ಹೆಸರು, ಉದ್ದು, ಶೇಂಗಾ ಬೆಳೆಗಳ ಬಿತ್ತನೆಯನ್ನು ಸಾಧ್ಯವಾದಷ್ಟು ಬೇಗನೇ ಮಾಡಬೇಕು.

ಬಿತ್ತನೆಯನ್ನು ಬೇಗ ಮತ್ತು ...

ಮಾಹಿತಿ: ಗಾಂಧಿ ಕೃಷಿ ವಿವಿ ಸಂಶೋಧಕರು ಬೆಂಗಳೂರು. ದೂ.ಸಂ.: 080-23330153

• VIJAYAVANI » HUBBALLI
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ

ದಿನದ ಚಿತ್ರ

ಪರಿಸರ ದಿನಾಚರಣೆ

ಪರಿಸರ ದಿನ ಅಂಗವಾಗಿ ರಾಣೆಬೆನ್ನೂರ ತಾಲೂಕಿನ ಹನುಮನಮಟ್ಟಿಯಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಸಿ ನೆಟ್ಟು, ಮುಂಗಾರು ಬೆಳೆಗಳ ತಾಂತ್ರಿಕತೆಯ ಅರಿವು ಮೂಡಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಅಶೋಕ ಪಿ., ಡಾ. ಸಿ.ಪಿ. ಮನ್ಸೂರ, ಮಣ್ಣು ವಿಜ್ಞಾನಿಗಳಾದ ಡಾ. ಕುಮಾರ ಬಿ.ಎಚ್., ಡಾ. ಕೃಷ್ಣಾ ನಾಯಕ ಹಾಗೂ ರೈತರು ಪಾಲ್ಗೊಂಡಿದ್ದರು.

ಸುದ್ದಿ ಕಾರ್ನರ್

ಕುಡುಪಲಿ: ಕೀಟಬಾಧೆಗೊಳಗಾದ ಬೆಳೆ ವೀಕ್ಷಣೆ

ಹಿರೇಕೆರೂರ: ಕುಡುಪಲಿ ಗ್ರಾಮದಲ್ಲಿ ಕೀಟ ಬಾಧೆಗೊಳಗಾದ ಹತ್ತಿ ಬೆಳೆಯನ್ನು ಕೃಷಿ ತಜ್ಞರು ವೀಕ್ಷಿಸಿದರು.

ಹಿರೇಕೆರೂರ: ಕುಡುಪಲಿ ಗ್ರಾಮ ಸೇರಿದಂತೆತಾಲೂಕಿನವಿವಿಧಕಡೆಗಳಲ್ಲಿ ಹತ್ತಿ ಬೆಳೆಯಲ್ಲಿ ಕಂಡು ಬರುವ ಕೀಟ ಬಾಧೆಯನ್ನು ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ। ಅಶೋಕ ಪಿ., ಕೀಟ ಶಾಸ್ತ್ರಜ್ಞ ಡಾ। ಕೆ.ಪಿ. ಗುಂಡಣ್ಣನವರ, ಉಪ ಕೃಷಿ ನಿರ್ದೇಶಕ ಮಂಜುನಾಥ ಅಂತರವಳ್ಳಿ, ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಮಲ್ಲಾಡದ ಹಾಗೂ ರಟ್ಟೀಹಳ್ಳಿ ಕೃಷಿ ಅಧಿಕಾರಿ ರಿಜ್ವಾನ್ ಹ್ಯಾರೀಸ್ ಅವರ ತಂಡ ಕುಡುಪಲಿ ಗ್ರಾಮದ ರೈತರ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಹತ್ತಿ ಬೆಳೆಯಲ್ಲಿ ಹುಳು ಬಾಧೆ, ಹೇನು, ಕರಿಜಿಗಿ ಮತ್ತು ನುಶಿ ಕೀಟಗಳ ಬಾಧೆ ಕಂಡು ಬರುತ್ತಿದ್ದು, ಇವುಗಳ ಹತೋಟಿ ಕ್ರಮಕ್ಕಾಗಿ ಅಸಿಟಾಮೆಪ್ರಡ್ 0.25 ಗ್ರಾಂ ಮತ್ತು ಫಿಪ್ರೋನಿಲ್ 1 ಮಿ.ಲೀ. ಅಥವಾ ಪ್ರೋಲೋ 0.5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು. ಹತ್ತಿ ಬಿತ್ತಿದ 40ರಿಂದ 45 ದಿನದ ಬೆಳೆಯಲ್ಲಿ ಅಲ್ಲಲ್ಲಿ ಎಲೆಗಳ ತುದಿ ಭಾಗದಿಂದ ಮಧ್ಯ ಭಾಗದವರೆಗೆ ಎಲೆ ಕೆಂಪಾಗುವ ಮೂಲಕ ಬೆಳೆ ಹಾನಿಯಾಗುತ್ತದೆ. ಹತೋಟಿಗಾಗಿ ಪ್ರತಿ ಲೀಟರ್ ನೀರಿಗೆ 10 ಗ್ರಾಂ ಮೆಗ್ನೇಷಿಯಂ ಸಲ್ಫೇಟ್ ಮತ್ತು 10 ಗ್ರಾಂ ಯೂರಿಯಾ ಬೆರೆಸಿ ಬೆಳಗಿನ ಜಾವ ಅಥವಾ ಸಂಜೆ ಸಮಯದಲ್ಲಿ ಸಿಂಪರಣೆ ಮಾಡಬೇಕು. ಅದಾದ ನಂತರ ಎಲೆ ಕೆಂಪಾಗುವಿಕೆ ಹೆಚ್ಚಾದ ಪಕ್ಷದಲ್ಲಿ ವಾರದ ನಂತರ ಮತ್ತೊಮ್ಮೆ ಸಿಂಪರಣೆ ಮಾಡಬೇಕು ಎಂದು ಕೃಷಿ ತಜ್ಞರು ರೈತರಿಗೆ ಸಲಹೆ ನೀಡಿದರು.

ಸುಮಾರು ಒಂದರಿಂದ ಒಂದೂವರೆ ತಿಂಗಳ ಗೋವಿನಜೋಳ ಬೆಳೆಯಲ್ಲಿ ಸಾಮಾನ್ಯವಾಗಿ ಕಾಂಡ ಕೊರಕದ ಬಾಧೆ ಕಂಡು ಬರುತ್ತದೆ. ಹೆಣ್ಣು ಚಿಟ್ಟೆಯು ಎಲೆಯ ಕೆಳಗೆ ಮೊಟ್ಟೆ ಇಡುತ್ತದೆ. ಮೊಟ್ಟೆಯಿಂದ ಹೊರಬಂದ ಮರಿಗಳು ಕಾಂಡವನ್ನು ಪ್ರವೇಶಿಸಿ ಬೆಳೆಯುತ್ತಿರುವ ತಿಳುವಾದ ಕಾಂಡವನ್ನು ತಿನ್ನುತ್ತದೆ. ಇದರಿಂದ ಸುಳಿ ಒಣಗುತ್ತದೆ. ಈ ಹಂತದಲ್ಲಿ ರೈತರು ಇಮಾಮೆಕ್ಟಿನ್ ಬೆಂಜೊಯಟ್ 0.2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು ಎಂದು ತಿಳಿಸಿದರು.

ರೈತರಾದ ಶಂಕ್ರಪ್ಪ ಕುಸಗೂರ, ಬಸನಗೌಡ ಕರೇಗೌಡ್ರ, ಕರಬಸಪ್ಪ ಕುಸಗೂರ, ರವಿ ಸಣ್ಣದೇವಣ್ಣನವರ ಮತ್ತು ನಿಜಲಿಂಗಪ್ಪ ಧರ್ಮಪ್ಪ ಮರಿಬಸಪ್ಪನವರ ಹಾಜರಿದ್ದರು.

acebook.com/vijaykarnataka www.vijaykarnataka.com ವಿಜಯ ಕರ್ನಾಟಕ

ವಿಜ್ಞಾನಿ, ಅಧಿಕಾರಿಗಳಿಂದ ಬೆಳೆಗಳ ಮಾಹಿತಿ

ಕೃಷಿ ಚಟುವಟಿಕೆ, ರೈತರಿಗೆ ತಿಳಿವಳಿಕೆ

■ ವಿಕ ಸುದ್ದಿಲೋಕ ರಾಣೇಬೆನ್ನೂರ

ತಾಲೂಕಿನಲ್ಲಿ ಈ ಬಾರಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿದ್ದರಿಂದ ರೈತರು ಹೆಚ್ಚಿನ ಉತ್ಸಾಹದಿಂದ ಕೃಷಿ ಚಟುವಟಿಕೆಗಳಲ್ಲಿ ಮಗ್ನರಾಗಿದ್ದಾರೆ. ಮುಂಚಿತವಾಗಿ ಬಿತ್ತನೆ ಮಾಡಿದ ಕೆಲವು ಕಡೆಗಳಲ್ಲಿ ಸಸಿಗಳು ಮೊಳಕೆಯೊಡೆದಿವೆ. ಈ ಹಿನ್ನೆಲೆಯಲ್ಲಿ ಕೃಷಿ ಅಧಿಕಾರಿಗಳು ಹಾಗೂ ಕೃಷಿ ವಿಶ್ವವಿದ್ಯಾಲಯದ ತಜ್ಞರು ಹೊಲಗಳಿಗೆ ಭೇಟಿ ನೀಡಿ ಕೀಟ ರೋಗ ಹತೋಟಿ ಬಗ್ಗೆ ತಿಳುವಳಿಕೆ ನೀಡಿದ್ದಾರೆ.

ರಾಣೇಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಹಾಗೂ ಕೃಷಿ ಅಧಿಕಾರಿಗಳು ತಾಲೂಕಿನ ರೈತರ ಹೊಲಗಳಿಗೆ ಭೇಟಿ ನೀಡಿ ಕೀಟ ರೋಗ ಹತೋಟಿ ಬಗ್ಗೆ ತಿಳುವಳಿಕೆ ನೀಡಿದರು.

ಕೀಟ, ರೋಗ ಹತೋಟಿಗೆ ಕ್ರಮ: ಇದೀಗ ಬಿತ್ತನೆ ಮಾಡಿರುವ ಮೆಕ್ಕೆಜೋಳ ಮತ್ತು ಹತ್ತಿ ಬೆಳೆಯಲ್ಲಿ ಕೀಟ ಮತ್ತು ರೋಗ ಬಾಧೆಗಳು ಕಂಡು ಬರುವ ಸಂಭವವಿದೆ. ಕೀಟ ರೋಗ ಭಾದೆಯನ್ನು ತಡೆಗಟ್ಟುವ ಸಲುವಾಗಿ ರೈತರಿಗೆ ಕೆಲವೊಂದು ಹತೋಟಿ ಕ್ರಮಗಳನ್ನು ಸೂಚಿಸಿದ್ದಾರೆ. ಅದರಂತೆ ಹತ್ತಿ ಬೆಳೆಯಲ್ಲಿ ಹೇನು, ಕರಿಜಿಗಿ ಮತ್ತು ನುಸಿ ಕೀಟಗಳ ಬಾಧೆ ಕಂಡು ಬಂದಲ್ಲಿ ಅವುಗಳ ಹತೋಟಿಗಾಗಿ ಅಸಿಟಾಮೆಪ್ರಡ್ 0.25 ಗ್ರಾಂ ಮತ್ತು ಫಿಪ್ರೋನಿಲ್ 1 ಮೀ.ಲಿ ಅಥವಾ ಫೋಲೋ 0.5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡಬೇಕು.

ಹತ್ತಿ ಬೆಳೆಯಲ್ಲಿ ಬಿತ್ತಿದ 40 ರಿಂದ 45 ದಿನದ ಬೆಳೆಯಲ್ಲಿ ಅಲ್ಲಲ್ಲಿ ಎಲೆಗಳ ತುದಿ ಭಾಗದಿಂದ ಮಧ್ಯ ಭಾಗದವರೆಗೆ ಎಲೆ ಕೆಂಪಾಗುವುದರ ಮೂಲಕ ಬೆಳೆ ಹಾನಿಯಾಗುತ್ತದೆ. ಅದರ ಹತೋಟಿಗಾಗಿ ಪ್ರತಿ ಲೀಟರ್ ನೀರಿಗೆ 10 ಗ್ರಾಂ ಮೆಗ್ನೀಷಿಯಂ ಸಲ್ಫೇಟ್ ಮತ್ತು 10 ಗ್ರಾಂ ಯೂರಿಯಾ ಬೆರೆಸಿ ಬೆಳಗಿನ ಜಾವ ಅಥವಾ ಸಂಜೆ ಸಮಯದಲ್ಲಿ ಸಿಂಪರಣೆ ಮಾಡಬೇಕು. ಅದಾದ ನಂತರ ಎಲೆ ಕೆಂಪಾಗುವಿಕೆ ಹೆಚ್ಚಾದ ಪಕ್ಷದಲ್ಲಿ ವಾರದ ನಂತರ ಮತ್ತೊಂದು ಸಿಂಪರಣೆಯನ್ನು ಮಾಡಬೇಕು.

ಗೋವಿನಜೋಳ ಬೆಳೆಯಲ್ಲಿಸುಮಾರು ಒಂದರಿಂದ ಒಂದೂವರೆ ತಿಂಗಳ ಬೆಳೆ ಅವಧಿಯಲ್ಲಿ ಸಾಮಾನ್ಯವಾಗಿ ಕಾಂಡ ಕೊರಕದ ಬಾಧೆ ಕಂಡು ಬರುತ್ತದೆ. ಹೆಣ್ಣು ಚಿಟ್ಟೆಯು ಎಲೆಯ ಕೆಳಗೆ ಮೊಟ್ಟೆ ಇಡುತ್ತದೆ. ಮೊಟ್ಟೆಯಿಂದ ಹೊರಬಂದ ಮರಿಗಳು ಕಾಂಡವನ್ನು ಪ್ರವೇಶಿಸಿ ಬೆಳೆಯುತ್ತಿರುವ ತಿಳುವಾದ ಕಾಂಡವನ್ನು ತಿನ್ನುತ್ತದೆ. ಇದರಿಂದ ಸುಳಿ ಒಣಗುತ್ತದೆ. ಈ ಹಂತದಲ್ಲಿ ರೈತರು ಇಮಾಮೆಕ್ಟಿನ್ ಬೆಂಜೊಯಟ್ 0.2 ಗ್ರಾಂ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು ಎಂದು ಸೂಚಿಸಲಾಗಿದೆ.

ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಅಶೋಕ ಪಿ., ಕೀಟ ಶಾಸ್ತ್ರಜ್ಞ ಕೆ.ಪಿ ಗುಂಡಣ್ಣನವರ, ಕೃಷಿ ಉಪ ನಿರ್ದೇಶಕ ಮಂಜುನಾಥ ಅಂತರವಳ್ಳಿ, ಸಹಾಯಕ ಕೃಷಿ ನಿರ್ದೇಶಕ ಜಿ.ಎಂ. ಬತ್ತಿಕೊಪ್ಪದ ತಾಲೂಕಿನ ರೈತರ ಹೊಲಗಳಿಗೆ ಭೇಟಿ ನೀಡಿದ್ದರು.

ಸೋಮವಾರ 18 ಜೂನ್ 2018 • 18 JUNE 2018
ಹಾವೇರಿ | ಲೋಕಲ್ ಎಕ್ಸ್‌ಪ್ರೆಸ್ | 5

ರೈತರ ಹೊಲಗಳಿಗೆ ಕೃಷಿ ಅಧಿಕಾರಿಗಳ ಭೇಟಿ

■ ವಿಜಯವಾಣಿ ಸುದ್ದಿಜಾಲ ರಾಣೆಬೆನ್ನೂರ

ಮೆಕ್ಕೆಜೋಳ ಮತ್ತು ಹತ್ತಿ ಬೆಳೆಯಲ್ಲಿ ವಿವಿಧ ಕೀಟ ಮತ್ತು ರೋಗಗಳು ಕಂಡು ಬರುವ ಸಂಭವವಿದ್ದು, ತಾಲೂಕಿನ ಕೋಣನತಂಬಗಿ ಮತ್ತು ನಿಟ್ಟೂರು ಗ್ರಾಮದ ರೈತರ ಜಮೀನುಗಳಿಗೆ ಕೃಷಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಸಹಾಯಕ ವಿಭಾಗೀಯ ಕೃಷಿ ನಿರ್ದೇಶಕ ಮಂಜುನಾಥ ಅಂತವರಳ್ಳಿ ಮಾತನಾಡಿ, ಹತ್ತಿ ಬೆಳೆಯಲ್ಲಿ ಹೇನು, ಕರಿಜಿಗಿ ಮತ್ತು ನುಸಿ ಕೀಟಗಳು ಕಂಡು ಬಂದಲ್ಲಿ, ಅವುಗಳ ಹತೋಟಿಗೆ ಅಸಿಟಾಮೆಪ್ರಡ್ 0.25 ಗ್ರಾಂ ಮತ್ತು ಫಿಪ್ರೋನಿಲ್ 1 ಮೀ.ಲಿ ಅಥವಾ ಪ್ರೋಲೋ 0.5 ಗ್ರಾಂ ಪ್ರತಿ ಲೀಟರ್ ನೀರಿಗೆ ಬೇರೆಸಿ ಸಿಂಪರಣೆ ಮಾಡಿದರೆ ಕೀಟಗಳು ಹತೋಟಿಯಾಗುತ್ತದೆ. ಹತ್ತಿ ಬಿತ್ತಿದ 40ರಿಂದ 45 ದಿನದ ಬೆಳೆಯಲ್ಲಿ ಅಲ್ಲಲ್ಲಿ ಎಲೆಗಳ ತುದಿ ಭಾಗದಿಂದ ಮಧ್ಯ ಭಾಗದವರೆಗೆ ಎಲೆ ಕೆಂಪಾಗುವುದರ ಮೂಲಕ ಬೆಳೆ ಹಾನಿಯಾಗುತ್ತದೆ. ಇದರ ಹತೋಟಿಗಾಗಿ ಪ್ರತಿ ಲೀಟರ್ ನೀರಿಗೆ 10 ಗ್ರಾಂ ಮೆಗ್ನೀಷಿಯಂ ಸಲ್ಫೇಟ್ ಮತ್ತು 10 ಗ್ರಾಂ ಯೂರಿಯಾ ಬೇರೆಸಿ ಬೆಳಗಿನ ಜಾವ ಅಥವಾ ಸಂಜೆ ಸಮಯದಲ್ಲಿ ಸಿಂಪರಣೆ ಮಾಡಬೇಕು. ಅದಾದ ನಂತರ ಎಲೆ ಕೆಂಪಾಗುವಿಕೆ ಹೆಚ್ಚಾದ ಪಕ್ಷದಲ್ಲಿ ಒಂದು ವಾರದ ನಂತರ ಮತ್ತೊಂದು ಸಿಂಪರಣೆ ಮಾಡಬೇಕು ಎಂದು ತಿಳಿಸಿದರು.

ಹನುಮನಮಟ್ಟಿ ಕೆವಿಕೆ ಮುಖ್ಯಸ್ಥ ಡಾ.ಪಿ. ಅಶೋಕ, ಕೀಟ ಶಾಸ್ತ್ರಜ್ಞ ಡಾ.ಕೆ.ಪಿ. ಗುಂಡಣ್ಣನವರ ಇತರರು ಉಪಸ್ಥಿತರಿದ್ದರು.

ರಾಣೆಬೆನ್ನೂರ ತಾಲೂಕಿನ ಕೋಣನತಂಬಗಿ ಗ್ರಾಮದ ಜಮೀನೊಂದಕ್ಕೆ ಕೃಷಿ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಪ್ರಜಾವಾಣಿ ಸೋಮವಾರ • ಆಗಸ್ಟ್ 6, 2018 ಹಾವೇರಿ 3

ಕೀಟ ಬಾಧೆಗೊಳಗಾದ ಬ್ಯಾಡಗಿ ತಾಲ್ಲೂಕಿನ ಮೋಟೆಬೆನ್ನೂರ ಗ್ರಾಮದ ಹೊಲಗಳಿಗೆ ವಿಜ್ಞಾನಿಗಳು ಭೇಟಿ ನೀಡಿ ಬೆಳೆ ಪರಿಶೀಲಿಸಿದರು

ಹೊಲಕ್ಕೆ ಭೇಟಿ ನೀಡಿದ ವಿಜ್ಞಾನಿಗಳು

ಬ್ಯಾಡಗಿ: ತಾಲ್ಲೂಕಿನ ಮೋಟೆಬೆನ್ನೂರ ಗ್ರಾಮದಲ್ಲಿ ಸೈನಿಕ (ಲದ್ದಿ) ಹುಳುಗಳಿಂದ ಹಾನಿಗೊಳಗಾದ ಹೊಲಗಳಿಗೆ ಧಾರವಾಡ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಭೇಟಿ ನೀಡಿ ಮೆಕ್ಕೆ ಜೋಳ ಹಾಗೂ ಸೋಯಾ ಅವರೆ ಹಾಗೂ ಇನ್ನಿತರ ಬೆಳೆಯನ್ನು ವೀಕ್ಷಿಸಿದರು.

ವಿಜ್ಞಾನಿ ಡಾ.ಅಶೋಕ ಪಿ., ಕೀಟ ಶಾಸ್ತ್ರಜ್ಞ ಕೃಷ್ಣ ನಾಯಕ್, ಮಂಜುನಾಥ ಅಂತರವಳ್ಳಿ ನೇತೃತ್ವದ ತಂಡ ಮೆಕ್ಕೆಜೋಳಕ್ಕೆ ಕಾಂಡ ಕೊರಕ ಮತ್ತು ಸೈನಿಕ ಹುಳುವಿನ ಬಾಧೆ ಕಂಡು ಬಂದಿರುವ ಕುರಿತು ರೈತರಿಂದ ವಿವರಣೆ ಪಡೆದರು.

ಸತತ ಮಳೆ ಹಾಗೂ ತಂಪು ವಾತಾವರಣ ಇರುವುದರಿಂದ ಕೀಟ ಬಾಧೆ ಹೆಚ್ಚಿದೆ. ಅವುಗಳ ಹತೋಟಿಗೆ ಕೀಟ ನಾಶಕದ ಸಿಂಪರಣೆ ಅಗತ್ಯ ಎಂದು ಕೃಷಿ ವಿಜ್ಞಾನಿಗಳು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕ ಅಮೃತೇಶ್ವರ, ರೈತ ಮುಖಂಡರಾದ ಮಲ್ಲಿಕಾರ್ಜುನ ಬಳ್ಳಾರಿ, ವಿಜಯ ಬಳ್ಳಾರಿ ಇದ್ದರು.

ವಿಜಯವಾಣಿ

ದಿನಾಂಕ : 21-10-2018

ಖಾಲಿ ಜಾಗದಲ್ಲಿ ಕೈತೋಟ ಬೆಳೆಸಿ

■ ವಿಜಯವಾಣಿ ಸುದ್ದಿಜಾಲ ಹಾವೇರಿ

ಮಹಿಳೆಯರು ಮನೆಯ ಖಾಲಿ ಜಾಗದಲ್ಲಿ ಕೈತೋಟ ಬೆಳೆಸಿ ಆರ್ಥಿಕವಾಗಿ ಸದೃಢರಾಗಬೇಕು ಎಂದು ಶಾಸಕ ನೆಹರು ಓಲೇಕಾರ ಹೇಳಿದರು.

ನಗರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಭಾಭವನದಲ್ಲಿ ಇತ್ತೀಚೆಗೆ ಜರುಗಿದ ರೈತ ಮಹಿಳಾ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ತಮ್ಮ ತಮ್ಮ ಮನೆಯ ಹಿತ್ತಲಿನಲ್ಲಿ ಕನಿಷ್ಠ ಐದು ತೆಂಗಿನ ಗಿಡಗಳನ್ನಾದರೂ ಬೆಳೆಸಿ ಸಂರಕ್ಷಿಸಬೇಕು. ಕೈತೋಟದಲ್ಲಿ ತರಕಾರಿ ಬೆಳೆಯಲು ಮುಂದಾಗಬೇಕು. ಇದರಿಂದ ಆರ್ಥಿಕವಾಗಿ ಸಬಲರಾಗಬಹುದು ಎಂದರು.

ಸಹಾಯಕ ಕೃಷಿ ನಿರ್ದೇಶಕ ಕರಿಯಲ್ಲಪ್ಪ ಕೆ. ಮಾತನಾಡಿ, ಭಾರತ ಕೃಷಿ ಪ್ರಧಾನ ದೇಶವಾಗಿದ್ದು, ಕೃಷಿಯಲ್ಲಿ ಪುರುಷರಿಗಿಂತ ಮಹಿಳೆಯರ ಪರಿಶ್ರಮ ಹೆಚ್ಚಿದೆ. ಕೃಷಿಯ ಎಲ್ಲ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸುತ್ತಾರೆ. ಆಹಾರ ಭದ್ರತೆಯಲ್ಲಿ ಗ್ರಾಮೀಣ ಮಹಿಳೆಯ ಪಾತ್ರ ಬಹಳ ಪ್ರಮುಖವಾಗಿದೆ ಎಂದರು.

ರೈತ ಮಹಿಳಾ ದಿನಾಚರಣೆಯಲ್ಲಿ ಯುವ ಶ್ರೇಷ್ಠ ರೈತ ಮಹಿಳೆ ಪ್ರಶಸ್ತಿ ಪಡೆದ ಕರ್ಜಗಿ ಗ್ರಾಮದ ಗೌರಮ್ಮ ಗುತ್ತಿ ಅವರನ್ನು ಸನ್ಮಾನಿಸಲಾಯಿತು.

ಹನುಮನಮಟ್ಟಿಯ ಕೆವಿಕೆ ಮುಖ್ಯಸ್ಥ ಡಾ. ಅಶೋಕ, ಸಿರಿಧಾನ್ಯ ಬೆಳೆ, ಸಮಗ್ರ ಕೃಷಿ, ವಿವಿಧ ವೈಜ್ಞಾನಿಕ ವಿಷಯಗಳ ಮಾಹಿತಿ ನೀಡಿದರು. ಹನುಮನಮಟ್ಟಿ ಕೃಷಿ ವಿವಿಯಿಂದ 2018-19ನೇ ಸಾಲಿನ ಯುವ ಶ್ರೇಷ್ಠ ರೈತ ಮಹಿಳೆ ಪ್ರಶಸ್ತಿ ಪಡೆದ ಕರ್ಜಗಿ ಗ್ರಾಮದ ಗೌರಮ್ಮ ಗುತ್ತಿ ಅವರನ್ನು ಸನ್ಮಾನಿಸಲಾಯಿತು.

ತಾ.ಪಂ. ಅಧ್ಯಕ್ಷ ಕರಿಯಪ್ಪ ಮಲ್ಲಪ್ಪ ಉಂಡಿ, ಉಪಾಧ್ಯಕ್ಷೆ ಸಾವಿತ್ರಮ್ಮ ಮರಡೂರ, ರೈತ ಸಂಘದ ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆ ಮಂಜುಳಾ ಅಕ್ಕಿ, ಕೃಷಿಕ ಸಮಾಜ ನಿರ್ದೇಶಕ ಡೊಂಕಣ್ಣನವರ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಶಿವಪುತ್ರಪ್ಪ ಶಿವಣ್ಣನವರ, ಕಾರ್ಯದರ್ಶಿ ಬಸವರಾಜ ಹಾದಿಮನಿ, ಪ್ರಕಾಶ ಹಂದ್ರಾಳ, ನಾಗಪ್ಪ ವಿಭೂತಿ ಉಪಸ್ಥಿತರಿದ್ದರು. ಆತ್ಮಾ ಅಧಿಕಾರಿ ಮಲ್ಲಿಕಾರ್ಜುನ ಗುಮ್ಮಡಿ ನಿರೂಪಿಸಿದರು. ತಾಂತ್ರಿಕ ಅಧಿಕಾರಿ ಕೊಟ್ರೇಶ ಗೆಜ್ಜಿ ಸ್ವಾಗತಿಸಿದರು. ಆತ್ಮಾ ಯೋಜನೆ ತಾಲೂಕು ತಾಂತ್ರಿಕ ವ್ಯವಸ್ಥಾಪಕ ವಿಶ್ವನಾಥರಡ್ಡಿ ರಡ್ಡೇರ ವಂದಿಸಿದರು.

ಬ್ಯಾಡಗಿ ತಾಲ್ಲೂಕಿನ ಮೋಟೆಬೆನ್ನೂರ ಗ್ರಾಮದ ಹೊಲಗಳಿಗೆ ವಿಜ್ಞಾನಿಗಳ ತಂಡ ಭೇಟಿ ನೀಡಿ ಬೆಳೆ ಪರಿಶೀಲನೆ ನಡೆಸಿತು

ಕೃಷಿ ವಿಜ್ಞಾನಿಗಳಿಂದ ಬೆಳೆ ಪರಿಶೀಲನೆ

ಬ್ಯಾಡಗಿ: ಪೋಷಕಾಂಶ ಹಾಗೂ ತೇವಾಂಶ ಕೊರತೆಯಿಂದ ಬೆಳೆಗಳು ಹಳದಿ ಬಣ್ಣಕ್ಕೆ ತಿರುಗಿವೆ ಎಂದು ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರ ಹಾಗೂ ಧಾರವಾಡದ ಹೆಬ್ಬಳ್ಳಿ ಫಾರ್ಮ್‌ನ ವಿಜ್ಞಾನಿಗಳ ತಂಡ ಅಭಿಪ್ರಾಯಪಟ್ಟಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎನ್.ಜಿ.ಅಮೃತೇಶ್ವರ ತಿಳಿಸಿದರು.

ಗುರುವಾರ ತಾಲ್ಲೂಕಿನ ಮೋಟೆಬೆನ್ನೂರ ಗ್ರಾಮ ವಿವಿಧ ಹೊಲಗಳಲ್ಲಿ ಗೋವಿನಜೋಳ, ಹತ್ತಿ ಹಾಗೂ ಶೇಂಗಾ ಬೆಳೆಗಳನ್ನು ಡಾ.ಗುಂಡಣ್ಣನವರ, ಡಾ.ಕೃಷ್ಣ ಹಾಗೂ ಡಾ.ವೆಂಕಟೇಶ ಕುಲಕರ್ಣಿ ನೇತೃತ್ವದ ತಂಡ ಬೆಳೆ ವೀಕ್ಷಣೆ ನಡೆಸಿತು.

ಕಾಂಡಕೊರಕದ ಭಾದೆ ಹಾಗೂ ಜಿಂಕ್ ಲಘುಪೋಷಕಾಂಶದ ಕೊರತೆ ನಿವಾರಣೆಗೆ ಇಮಾಮೆಕ್ಟಿನ್ ಬೆಂಜೊಯೇಟ್ 0.25 ಗ್ರಾಂ ಪ್ರತಿ ಲೀಟರ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಬೇಕು. ಹಳದಿ ಬಣ್ಣಕ್ಕೆ ತಿರುಗಿರುವ ಗೋವಿನ ಜೋಳಕ್ಕೆ ಜಿಂಕ್ ಸಲ್ಫೇಟ್ 5 ಗ್ರಾಂ ಪ್ರತಿ ಲೀಟರ್ ನೀರಿನ ಪ್ರಮಾಣದಲ್ಲಿ ಬೆರೆಸಿ ಸಿಂಪರಣೆ ಮಾಡುವಂತೆ ತಿಳಿಸಿದರು.

ಶೇಂಗಾ ಹಾಗೂ ಹತ್ತಿ ಬೆಳೆಗೆ ರಸ ಹೀರುವ ಕೀಟದ ಭಾದೆ ಹತೋಟಿಗೆ ಫಿಪ್ರೋನಿಲ್ 1 ಮಿ.ಲಿ ಪ್ರತಿ ಲೀಟರ ನೀರಿನ ಪ್ರಮಾಣದಲ್ಲಿ ಸಿಂಪರಣೆ ಮಾಡುವಂತೆ ಸೂಚಿಸಿದರು.

ಸೋಯಾ ಅವರೆ, ಮೆಕ್ಕೆ ಜೋಳ, ಹತ್ತಿ ಬೆಳೆ ಸಂರಕ್ಷಿಸಲು ಪೊಟ್ಯಾಸಿಯಂ ನೈಟ್ರೇಟ್ 10 ಗ್ರಾಂ ಪ್ರತಿ ಲೀಟರ ನೀರಿನ ಪ್ರಮಾಣದಲ್ಲಿ ಸಿಂಪರಣೆ ಕಾರ್ಯ ಕೈಗೊಳ್ಳಲು ವಿಜ್ಞಾನಿಗಳು ಸೂಚಿಸಿದರು ಎಂದು ಅಮೃತೇಶ್ವರ ಮಾಹಿತಿ ನೀಡಿದರು. ಕೃಷಿ ಅಧಿಕಾರಿಗಳಾದ ಮಂಜುನಾಥ. ಆರ್, ಹಿರಿಯ ತೋಟಗಾರಿಕೆ ನಿರ್ದೇಶಕಿ ವಿಜಯಲಕ್ಷ್ಮೀ, ಚಂದ್ರಶೇಖರ, ಸುರೇಶನಾಯ್ಕ, ರೈತ ಮುಖಂಡರಾದ ಮಲ್ಲಿಕಾರ್ಜುನ ಬಳ್ಳಾರಿ, ಬಸವರಾಜ ಇದ್ದರು.

ಮಳೆಗಾಗಿ ಮುಗಿಲಿನತ್ತ ರೈತರ ಚಿತ್ತ

ಮೇ ಕೊನೆಯಿಂದ ಬಿರುಸುಗೊಂಡಿದ್ದ ಮಳೆ ಕ್ರಮೇಣ ಕುಂಠಿತ | ಬೆಳೆ ಉಳಿಸಿಕೊಳ್ಳಲು ಕಸರತ್ತು

■ ವಿಜಯವಾಣಿ ವಿಶೇಷ ರಾಣೆಬೆನ್ನೂರ

ವಿಜಯವಾಣಿ ವಿಶೇಷ

ಸತತ ಬರಗಾಲದಿಂದ ಬೇಸತ್ತ ತಾಲೂಕಿನ ರೈತರು ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಎಡಬಿಡದೇ ಸುರಿದ ಮಳೆಯಿಂದ ಬಹಳ ಖುಷಿಯಿಂದಲೇ ಕೃಷಿ ಚಟುವಟಿಕೆ ಆರಂಭಿಸಿದ್ದರು. ಆದರೆ, ಕಳೆದ 12 ದಿನಗಳಿಂದ ಮಳೆರಾಯ ಮಾಯವಾಗಿದ್ದು, ಬಿತ್ತನೆ ಮಾಡಿದ ರೈತರು ಮುಗಿಲು ನೋಡುವಂತಾಗಿದೆ.

ಮೇ ತಿಂಗಳಲ್ಲಿ ನಗರ ಸೇರಿದಂತೆ ತಾಲೂಕಿನಾದ್ಯಂತ ಮಳೆ ಭರ್ಜರಿ ಸದ್ದು ಮಾಡಿತ್ತು. ಇದರಿಂದಾಗಿ ರೈತರು ಜಮೀನುಗಳನ್ನು ಹಸನು ಮಾಡಿಕೊಂಡು ಬಿತ್ತನೆಗೆ ಸಿದ್ಧತೆ ಮಾಡಿಕೊಂಡರು. ಮೇ ಕೊನೆಯ ಹಾಗೂ ಜೂನ್ ತಿಂಗಳ ಮೊದಲ ವಾರದಲ್ಲೂ ಮಳೆ ಉತ್ತಮವಾಗಿಯೇ ಸುರಿಯಿತು.

ಆದ್ದರಿಂದ ಜಮೀನು ಬಿತ್ತನೆಗೆ ಯೋಗ್ಯವಾದ ಕಾರಣ ಶೇ. 50ರಷ್ಟು ರೈತರು ಉತ್ತಮ ಮಳೆ ನಿರೀಕ್ಷೆಯಲ್ಲಿಯೇ ಬಿತ್ತನೆ ಕಾರ್ಯ ಪೂರ್ಣಗೊಳಿಸಿದ್ದಾರೆ. ಇನ್ನುಳಿದ ರೈತರು ಬಿತ್ತನೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಆದರೆ, ಆರಂಭದಲ್ಲಿ ಉತ್ಸಾಹ ತೋರಿದ ವರುಣ ಮಾತ್ರ ಸದ್ಯ ಮಾಯವಾಗಿದ್ದಾನೆ. ತಾಲೂಕಿನಲ್ಲಿ ಕೇವಲ ಮೋಡ ಕವಿದ ವಾತಾವರಣ, ಒಣ ಹವೆ, ಆಗಾಗ ಕೊಂಚ ಮಳೆ ಹನಿಗಳು ಭೂಮಿಗೆ ಬೀಳುತ್ತಿವೆ ಎಂಬುದನ್ನು ಹೊರತುಪಡಿಸಿದರೆ, ರೈತರ ನಿರೀಕ್ಷೆಯಂತೆ ಮಳೆ ಸುರಿಯುತ್ತಿಲ್ಲ.

ಕುಂಠಿತವಾದ ಮಳೆ: ಕಳೆದ ಏಪ್ರಿಲ್‌ನಲ್ಲಿ ವಾಡಿಕೆ ಮಳೆ ಶೇ. 42 ಮಿ.ಮೀ.ರಷ್ಟು ಇದ್ದರೆ, 56.96ರಷ್ಟು ಮಳೆಯಾಗಿತ್ತು. ಮೇ ತಿಂಗಳಲ್ಲಿ ವಾಡಿಕೆ ಮಳೆ ಶೇ. 88ರಷ್ಟು ಇದ್ದರೆ, ಶೇ. 98.92ರಷ್ಟು ಮಳೆಯಾಗಿತ್ತು. ಆದರೆ, ಜೂನ್ ತಿಂಗಳಲ್ಲಿ ವಾಡಿಕೆ ಮಳೆ ಶೇ. 69ರಷ್ಟು ಇದ್ದರೆ, ಈವರೆಗೆ ಕೇವಲ ಶೇ. 49ರಷ್ಟು ಮಳೆಯಾಗಿದೆ. ಇದೇ ರೀತಿ ದಿನದಿಂದ ದಿನಕ್ಕೆ ಮಳೆ ಕುಂಠಿತವಾದರೆ, ಮುಂದಿನ ದಿನದಲ್ಲಿ ರೈತರು ಬೆಳೆ ಉಳಿಸಿಕೊಳ್ಳಲು ಟ್ಯಾಂಕರ್ ನೀರಿನ ಮೊರೆ ಹೋಗಬೇಕಾಗುತ್ತದೆ.

ಬಾರದ ಯುಟಿಪಿ ನೀರು: ತಾಲೂಕಿನಲ್ಲಿ ಮಳೆ ಕೊರತೆ ಉಂಟಾದರೆ, ತುಂಗಾ ಮೇಲ್ದಂಡೆ ಯೋಜನೆ (ಯುಟಿಪಿ) ಕಾಲುವೆ ನೀರು ರೈತರ ಬೆಳೆಗಳಿಗೆ ಜೀವಕಳೆ ನೀಡಬೇಕು. ಈಗಾಗಲೇ ಭದ್ರಾ ಜಲಾಶಯಕ್ಕೆ ಸಾಕಷ್ಟು ನೀರು ಬಂದಿದೆ. ಆದರೆ, ಈವರೆಗೂ ಯುಟಿಪಿ ಕಾಲುವೆಯಲ್ಲಿ ನೀರು ಹರಿಸಿಲ್ಲ. ರೈತರಿಗೆ ಸದ್ಯ ಕಾಲುವೆ ನೀರು ಸಹ ಅವಶ್ಯವಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕಾಲುವೆ ಮೂಲಕ ನೀರು ಹರಿಸಲು ಕ್ರಮ ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ರಾಣೆಬೆನ್ನೂರ ನಗರದ ಹೊರವಲಯದಲ್ಲಿ ರೈತ ಬಸಪ್ಪ ತೋಟಗೇರ ಜಮೀನು ಹಸನು ಮಾಡಿ ಮಳೆಗಾಗಿ ಎದುರು ನೋಡುತ್ತ ಕುಳಿತಿರುವುದು.

ಮೇ ತಿಂಗಳಲ್ಲಿ ಬಿತ್ತನೆ ಮಾಡಿದ ಬೀಜಗಳು ಮೊಳಕೆಯೊಡೆದಿರುವುದು.

> ಆರಂಭದಲ್ಲಿ ಉತ್ತಮವಾಗಿ ಬಂದ ಮಳೆ ಕಳೆದ ಒಂದು ವಾರದಿಂದ ಸ್ವಲ್ಪ ಕುಂಠಿತವಾಗಿದೆ. ಈಗಾಗಲೇ ಸಾಕಷ್ಟು ರೈತರು ಬಿತ್ತನೆ ಮಾಡಿದ್ದಾರೆ. ಇನ್ನು ಕೆಲವರು ಬಿತ್ತನೆ ಮಾಡುತ್ತಿದ್ದಾರೆ. ಈ ಹಂತದಲ್ಲಿ ಮಳೆ ಉತ್ತಮವಾಗಿ ಬಂದರೆ, ರೈತರ ಬೆಳೆಗಳಿಗೆ ಅನುಕೂಲವಾಗಲಿದೆ.
>
> | ಕೃಷಿ ಇಲಾಖೆ ಅಧಿಕಾರಿ

> ಸತತ ಮೂರ್ನಾಲ್ಕು ವರ್ಷಗಳಿಂದ ಮಳೆ ರೈತರ ಜೀವನದಲ್ಲಿ ಕಣ್ಣಾಮುಚ್ಚಾಲೆ ಆಡುತ್ತಲೇ ಇದೆ. ಈ ವರ್ಷವಾದರೂ ಉತ್ತಮ ಮಳೆ ಬೀಳಬಹುದು ಎಂಬ ನಿರೀಕ್ಷೆಯಲ್ಲಿದ್ದೇವೆ. ಆದರೆ, ಕಳೆದ ವಾರದಿಂದ ಮಳೆ ಕುಂಠಿತವಾಗುತ್ತ ಬಂದಿದೆ. ಮುಂದಿನ ದಿನದಲ್ಲಿ ಇದೇ ರೀತಿಯಾದರೆ ರೈತರು ಬೆಳೆಗಳನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಆದ್ದರಿಂದ ಸರ್ಕಾರ ಮೋಡಬಿತ್ತನೆಯಂಥ ಕ್ರಮಕ್ಕೆ ಚಿಂತಿಸಬೇಕಿದೆ.
>
> | ಯುವ ಕೃಷಿಕ

ಕಳೆದ ವರ್ಷ ವಾಡಿಕೆಗಿಂತ ಕಡಿಮೆ ಮಳೆ

2017ರಲ್ಲಿ ಮೇ ತಿಂಗಳಿಂದ ಆಗಸ್ಟ್‌ವರೆಗೂ ವಾಡಿಕೆಗಿಂತ ಕಡಿಮೆ ಮಳೆಯಾಗಿತ್ತು. ಮೇನಲ್ಲಿ 88.00 ಮಿ.ಮೀ. ವಾಡಿಕೆ ಮಳೆಯಿದ್ದರೆ, 56 ಮಿ.ಮೀ. ಮಳೆಯಾಗಿತ್ತು. ಜೂನ್‌ನಲ್ಲಿ 69.00 ಮಿ.ಮೀ ವಾಡಿಕೆ ಮಳೆಯಿದ್ದರೆ, 19.54 ಮಿ.ಮೀ. ಮಳೆಯಾಗಿತ್ತು. ಜುಲೈನಲ್ಲಿ 97.00 ಮಿ.ಮೀ. ವಾಡಿಕೆ ಮಳೆಯಿದ್ದರೆ, 75 ಮಿ.ಮೀ. ಮಳೆಯಾಗಿತ್ತು. ಆಗಸ್ಟ್‌ನಲ್ಲಿ 62.00 ಮಿ.ಮೀ. ವಾಡಿಕೆ ಮಳೆಯಿದ್ದರೆ, 49 ಮಿ.ಮೀ. ಮಳೆಯಾಗಿತ್ತು. ಪ್ರಸಕ್ತ ವರ್ಷವೂ ಜೂನ್ ತಿಂಗಳ ವಾಡಿಕೆ ಮಳೆ 69.00 ಮಿ.ಮೀ. ಇದ್ದರೆ, ಈವರೆಗೆ 49 ಮಿ.ಮೀ. ಮಳೆಯಾಗಿದೆ.

ಗಮನ ಸೆಳೆದ ಗಿನಿ ಪಿಗ್

ಧಾರವಾಡ: ಕೃಷಿ ಮೇಳಕ್ಕೆ ಗಿನಿ ಪಿಗ್ (ಫಾರಿನ್ ಇಲಿ) ಬಂದಿದ್ದು, ವೀಕ್ಷಕರನ್ನು ಸೆಳೆಯುತ್ತಿದೆ. ಮೇಳದಲ್ಲಿ ಪ್ರಥಮ ಸಾಲಿನಲ್ಲೇ ಸ್ಥಾಪಿಸಿರುವ ಹೈಟೆಕ್ ಮಳಿಗೆಗಳ ಕೃಷಿ ವಸ್ತು ಪ್ರದರ್ಶನದಲ್ಲಿನ ಹಾವೇರಿ ಜಿಲ್ಲೆ ಹನುಮನಮಟ್ಟಿ ಕೇಂದ್ರದಲ್ಲಿ ಈ ಇಲಿ ಇದೆ.

ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ ಕುಮಾರ ಪಾಟೀಲ ಎಂಬುವವರು ಪಶ್ಚಿಮ ಬಂಗಾಳದಿಂದ 3 ವರ್ಷದ ಹಿಂದೆ ಈ ಇಲಿಯನ್ನು ತಂದು ಸಾಕುತ್ತಿದ್ದಾರೆ. ಇದರಲ್ಲಿ ಬಣ್ಣ ಬಣ್ಣದ ಹಾಗೂ ಸಂಪೂರ್ಣ ಬಿಳಿ ಬಣ್ಣದ ತಳಿಗಳಿವೆ. ಬಣ್ಣದ ಇಲಿಗಳನ್ನು ಮನೆಗಳಲ್ಲಿ ಸಾಕಲು ಖರೀದಿ ಮಾಡಿದರೆ, ಬಿಳಿ ಇಲಿಯನ್ನು ಪಶು ವೈದ್ಯರು ಸಂಶೋಧನೆ ನಡೆಸುವ ಹೊಸ ಔಷಧಿಯ ಬಳಕೆಯ ಪ್ರಯೋಗಕ್ಕೆ ಬಳಸುತ್ತಾರೆ.

ನಡೆದಿದೆ ಟೆಫ್ ಬೆಳೆ ಸಂಶೋಧನೆ

ಇಥಿಯೋಪಿಯಾದ ಆಹಾರ | ಬನವಾಸಿಯ ರೈತನಿಂದ ಪ್ರಾಯೋಗಿಕ ಕೃಷಿ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಸಿರಿಧಾನ್ಯಗಳಲ್ಲಿ ಒಂದಾಗಿರುವ, ಇಥಿಯೋಪಿಯಾದಲ್ಲಿ ಪ್ರಮುಖ ಆಹಾರವಾಗಿರುವ ಟೆಫ್ ಬೆಳೆಯನ್ನು ಪ್ರಾಯೋಗಿಕವಾಗಿ ಬೆಳೆಯುವ ಮೂಲಕ ನಮ್ಮ ದೇಶದ ಮಣ್ಣಿನಲ್ಲಿ ಸಹ ಈ ಬೆಳೆ ಬೆಳೆಯಬಹುದು ಎಂಬುದನ್ನು ಹಾವೇರಿ ಜಿಲ್ಲೆ ಕೃಷಿ ವಿಜ್ಞಾನ ಕೇಂದ್ರ ಸಾಬೀತುಪಡಿಸಿದೆ.

ಈ ಬೆಳೆಯನ್ನು ಶಿರಸಿ ತಾಲೂಕು ಬನವಾಸಿ ಸಮೀಪದ ಕೃಷಿಕ ಹನುಮಂತಪ್ಪ ಮಡ್ಲೂರ್ ಅವರು ಬೆಳೆದು ಯಶಸ್ವಿಯಾಗಿದ್ದಾರೆ. ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ನೀಡಿದ 50 ಗ್ರಾಂ. ಬೀಜವನ್ನು ಅರ್ಧ ಎಕರೆ ಪ್ರದೇಶದಲ್ಲಿ ಬೆಳೆದಿದ್ದಾರೆ.

ಈ ಕೃಷಿಕನ ಸಾಧನೆ ಮೆಚ್ಚಿದ ಹಾವೇರಿ ಜಿಲ್ಲೆ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಸಹ ಆತನಿಂದ ಬೀಜ ಪಡೆದು ಸುಮಾರು 20 ಗುಂಟೆ ಜಾಗದಲ್ಲಿ ಜುಲೈನಲ್ಲಿ ಬಿತ್ತನೆ ಮಾಡಿದ್ದಾರೆ. ಈ ಬೆಳೆಯನ್ನು ಒಣ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದ್ದು, ರೈತರಿಗೆ ಸಾಕಷ್ಟು ಆದಾಯ ತಂದು ಕೊಡುವ ಬೆಳೆಯಾಗಿದೆ.

ಟೆಫ್ ಬೆಳೆ

ಉತ್ತಮ ಆಹಾರ

ಟೆಫ್ ಬೆಳೆ ಬೆಳೆಯಲು ಖರ್ಚು ಕಡಿಮೆಯಾಗಿದ್ದು, ಜನರ ಆರೋಗ್ಯ ದೃಷ್ಟಿಯಿಂದ ಸಹ ಅತ್ಯುತ್ತಮ ಆಹಾರವಾಗಿದೆ. ಹನಮನಮಟ್ಟಿ ಕೇಂದ್ರದಲ್ಲಿ ಜುಲೈನಲ್ಲಿ ಈ ಬೀಜ ಬಿತ್ತನೆ ಮಾಡಿದ್ದು, ಇನ್ನು ಕೆಲ ದಿನಗಳಲ್ಲಿ ಫಸಲು ಬರಲಿದೆ. ನಂತರ ರೈತರಿಗೆ ಈ ಬೆಳೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುವುದು.

| ಡಾ. ಅಶೋಕ.ಪಿ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ

ಟೆಫ್ ಪ್ರಯೋಜನ

ಟೆಫ್ ಏಕದಳ ಧಾನ್ಯ ಬೆಳೆಯಾಗಿದ್ದು, ಗ್ಲೂಟೀನ್ ಅಂಶ ಇಲ್ಲದೆ ಅತ್ಯಧಿಕ ಪ್ರೋಟೀನ್ ಹೊಂದಿದೆ. ಮಧುಮೇಹಿಗಳಿಗೆ ಈ ಆಹಾರ ಅತ್ಯುತ್ತಮವಾಗಿದೆ ಎಂಬ ಅಂಶಗಳನ್ನು ಹಿರಿಯ ವಿಜ್ಞಾನಿಗಳು ಈಗಾಗಲೇ ಅರಿತುಕೊಂಡಿದ್ದಾರೆ. ಹೀಗಾಗಿ ಈ ಬೆಳೆಯನ್ನು ಪ್ರಾಯೋಗಿಕವಾಗಿ ಬೆಳೆಯಲಾಗುತ್ತಿದೆ. ಬೆಳೆ ಬಗ್ಗೆ ಹಿರಿಯ ವಿಜ್ಞಾನಿಗಳು ಸಂಪೂರ್ಣ ಸಂಶೋಧನೆ ನಡೆಸಿದ ಬಳಿಕ ರೈತರಿಗೆ ಒದಗಿಸಲಿದ್ದಾರೆ.

ನಾಟಿ ಮಾಡುವ ಪದ್ಧತಿ

ಟೆಫ್ ಬೀಜ ಅತಿ ಚಿಕ್ಕದಾಗಿದೆ. ಅದನ್ನು ಮರಳಿನಲ್ಲಿ ಮಿಶ್ರಣ ಮಾಡಿ ಮಡಿಯಲ್ಲಿ ಸಸಿ ತಯಾರಿಸಿ ಸುಮಾರು 25 ದಿನಗಳ ನಂತರ ನಾಟಿ ಮಾಡಬಹುದಾಗಿದೆ. ಒಂದು ಎಕರೆ ಪ್ರದೇಶದಲ್ಲಿ ಈ ಬೆಳೆ ಬೆಳೆಯಲು ಕೇವಲ 50 ಗ್ರಾಂ. ಬೀಜ ಸಾಕು ಎನ್ನುತ್ತಾರೆ ವಿಜ್ಞಾನಿಗಳು.

198.45 ಕ್ವಿಂ. ಬೀಜ ಮಾರಾಟ

ಕೃಷಿ ಮೇಳದ 3ನೇ ದಿನವಾದ ಸೋಮವಾರ ಕೃಷಿ ವಿಶ್ವವಿದ್ಯಾಲಯದ ಬೀಜ ಘಟಕದಿಂದ 198.45 ಕ್ವಿಂಟಲ್ ಹಿಂಗಾರು ಬೆಳೆಗಳ ಬೀಜ (ಸುಮಾರು ರೂ. 6.20 ಲಕ್ಷ ಮೌಲ್ಯ) ಮಾರಾಟವಾದವು. ಕೃಷಿ ತಂತ್ರಜ್ಞಾನ ಸಲಹಾ ಕೇಂದ್ರಕ್ಕೆ 475 ರೈತರು ಭೇಟಿ ನೀಡಿ ವಿವಿಧ ಸಮಸ್ಯೆಗಳನ್ನು ವಿಜ್ಞಾನಿಗಳ ಜೊತೆಗೆ ಚರ್ಚಿಸಿ ಸಲಹೆ ಪಡೆದರು. 3ನೇ ದಿನ ಸುಮಾರು 5.75 ಲಕ್ಷ ಜನರು ಭಾಗಿಯಾಗಿದ್ದರು.

ಮಂಗಳವಾರ • ಸೆಪ್ಟೆಂಬರ್ 25, 2018 ಪ್ರಜಾವಾಣಿ

ಹಾವೇರಿ ಕೃಷಿ ವಿಜ್ಞಾನ ಕೇಂದ್ರದ ಯೋಜನೆ

ಟೆಫ್, ಚಿಯಾ ಬೆಳೆ ಪರಿಚಯಿಸಲು ಸಿದ್ಧತೆ

• ಶಿವಕುಮಾರ ಹಳ್ಯಾಳ

ರೈತರಿಗೆ ಚಿಯಾ ಗಿಡಗಳನ್ನು ತೋರಿಸುತ್ತಿರುವ ಡಾ.ಪಿ.ಅಶೋಕ

ಚಿಯಾ ಬೀಜಗಳು

ಟೆಫ್ ಬೀಜಗಳು

ಧಾರವಾಡ: ಸಿರಿಧಾನ್ಯಗಳಲ್ಲಿ ಒಂದಾದ, ಇಥಿಯೋಪಿಯಾದಲ್ಲಿ ಪ್ರಮುಖ ಆಹಾರವಾಗಿರುವ 'ಟೆಫ್' ಹಾಗೂ ಮೆಕ್ಸಿಕೊ ಮತ್ತು ದಕ್ಷಿಣ ಅಮೆರಿಕ ಮೂಲದ ಪೌಷ್ಟಿಕ ಆಹಾರ ಧಾನ್ಯವಾಗಿರುವ 'ಚಿಯಾ' ಬೆಳೆಯನ್ನು ಇಲ್ಲಿ ಪರಿಚಯಿಸಲು ಹಾವೇರಿ ಕೃಷಿ ವಿಜ್ಞಾನ ಕೇಂದ್ರ ಸಿದ್ಧತೆ ನಡೆಸಿದೆ.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ. ಪಿ.ಅಶೋಕ, 'ಟೆಫ್ ಬೆಳೆ ಅತಿ ಕಡಿಮೆ ಪ್ರಮಾಣ ನೀರು, ಗೊಬ್ಬರ ಹಾಕಿ ಬೆಳೆಯುವ ಸಿರಿಧಾನ್ಯ. ಜಗತ್ತಿನಲ್ಲಿ 'ಇಂದು ಸೂಪರ್ ಫುಡ್' ಕಲ್ಪನೆ ಬೆಳೆಯುತ್ತಿದೆ. ಭಾರತೀಯ ಆಹಾರ ಪದ್ಧತಿಗೆ ಟೆಫ್ ಸಿರಿಧಾನ್ಯ ಬೆಳೆ ಹೊಂದಿಕೊಳ್ಳುತ್ತದೆ. ಪ್ರತಿ ಕೆಜಿಗೆ ₹ 650 ಮಾರುಕಟ್ಟೆ ದರವಿದೆ. ಒಣ ಭೂಮಿಯಲ್ಲಿ ಬೆಳೆಯಬಹುದಾಗಿದೆ' ಎಂದರು.

'ಟೆಫ್ ಏಕದಳ ಧಾನ್ಯ ಬೆಳೆ ಗ್ಲುಟೆನ್ ಅಂಶವಿಲ್ಲ. ಅತ್ಯಧಿಕ ಸಸಾರಜನಕ ಹೊಂದಿದೆ. ಮಧುಮೇಹಿಗಳಿಗೆ ಈ ಧಾನ್ಯದಿಂದ ತಯಾರಿಸಿದ ಆಹಾರ ಅತ್ಯುತ್ತಮವಾಗಿದೆ. ಟೆಫ್ ಬೀಜಗಳನ್ನು ಮರಳಿನೊಂದಿಗೆ ಮಿಶ್ರಗೊಳಿಸಿ ಸಸಿ ಮಡಿ ಮೂಲಕ ಬೆಳೆದು ನೆಡಬಹುದಾಗಿದೆ. ದೋಸೆ ಹಾಗೂ ಬ್ರೆಡ್ ತಯಾರಿಕೆಯಲ್ಲಿ ಬಳಸಬಹುದಾಗಿದೆ' ಎಂದು ಅಶೋಕ ಹೇಳಿದರು.

'ಈಗಾಗಲೇ ಶಿರಸಿಯ ರೈತ ಹನುಮಂತಪ್ಪ ಮಡ್ಲೂರ್ ಈ ಬೆಳೆ ಬೆಳೆದಿದ್ದಾರೆ. ಅವರಿಂದ ಟೆಫ್ ಬೀಜಗಳನ್ನು ಪಡೆದು ಎರಡು ಗುಂಟೆ ಜಾಗದಲ್ಲಿ ಪ್ರಾಯೋಗಿಕವಾಗಿ ಬೆಳೆದು ಸಂಶೋಧನೆಗೆ ಒಳಪಡಿಸಲಾಗುತ್ತಿದೆ' ಎಂದರು.

'ಚಿಯಾ ಎಂಬುದು ಲ್ಯಾಮಿಯೇಸಿ ಕುಟುಂಬಕ್ಕೆ ಸೇರಿದ ಆಹಾರ ಧಾನ್ಯ. ಇದರ ಕಾಳಿನಲ್ಲಿ ಶೇ 30 ರಿಂದ 35 ರಷ್ಟು ಎಣ್ಣೆ ಅಂಶ ಹಾಗೂ ಶೇ 60 ರಷ್ಟು ಒಮೇಗಾ-3 ಮೇದಾಮ್ಲ ಹೊಂದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದ್ದು, ಪ್ರಮುಖ ವಾಣಿಜ್ಯ ಬೆಳೆಯಾಗಿ ಪರಿವರ್ತನೆಗೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಈ ಬೆಳೆಯನ್ನು ವಿಜ್ಞಾನ ಕೇಂದ್ರದಿಂದ ಜನತೆಗೆ ಪರಿಚಯಿಸಲು ತಯಾರಿ ನಡೆದಿದೆ' ಎಂದು ಹೇಳಿದರು.

'ಈ ಬೆಳೆಯನ್ನು ಚಳಿಗಾಲದಲ್ಲಿ ಮಾತ್ರ ಬೆಳೆಯಬಹುದಾಗಿದೆ. ಬೇಸಿಗೆಯಲ್ಲಿ ಬೆಳೆದರೆ ಅಷ್ಟಾಗಿ ಇಳುವರಿ ಬಾರದು. ಭೂಮಿಯಿಂದ ಅರ್ಧ ಅಡಿ ಎತ್ತರದ ಏರು ಮಡಿಗಳನ್ನು ತಯಾರಿಸಬೇಕು. ಅದರ ಮೇಲೆ ತೆಳು ಪದರದಂತೆ ಕುಟ್ಟಣೆಯ ಮಣ್ಣು ಎರೆಹುಳುವಿನ ಗೊಬ್ಬರ ಹರಡಬೇಕು. ಸಸಿಮಡಿಯ ಮೇಲ್ಪದರವು ಯಾವಾಗಲೂ ಹಸಿಯಾಗಿರುವಂತೆ ನೋಡಿಕೊಳ್ಳಬೇಕು. 3-4 ದಿನಗಳ ನಂತರ ಬೀಜದ ಮೊಳಕೆ ಕಾಣಿಸಿಕೊಳ್ಳುತ್ತದೆ. ಅದಾದ ನಂತರ 21 ದಿನಗಳಿಗೆ ಸಸಿಗಳು ನಾಟಿ ಮಾಡಲು ಸಿದ್ಧವಾಗುತ್ತವೆ' ಎಂದರು.

'ಚಿಯಾ ಗಿಡಗಳು 40-55 ದಿನಗಳಲ್ಲಿ ಹೂ ಬಿಡಲು ಪ್ರಾರಂಭಿಸುತ್ತವೆ. ಇದಾದ 25 ರಿಂದ 30 ದಿನಗಳಲ್ಲಿ ತೆನೆ ತುಂಬಿ ಬೀಜ ಬಲಿತು ಗಿಡ ಹಳದಿ ಬಣ್ಣಕ್ಕೆ ತಿರುಗುತ್ತದೆ. ಈ ಸಮಯದಲ್ಲಿ ಕೊಯ್ಲು ಮಾಡಿ ಬೀಜ ಬೇರ್ಪಡಿಸಬೇಕು' ಎಂದು ಡಾ. ಪಿ.ಅಶೋಕ ತಿಳಿಸಿದರು.

ರಾಣೆಬೆನ್ನೂರು ತಾಲ್ಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರ ಯತ್ನ

32 ಸಿರಿಧಾನ್ಯಗಳ ಸಂರಕ್ಷಣೆ

• ಹರ್ಷವರ್ಧನ ಪಿ.ಆರ್.

ಹಾವೇರಿಯ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈಚೆಗೆ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳನ್ನು ಪರಿಶೀಲಿಸುತ್ತಿರುವುದು. ಪ್ರಗತಿಪರ ರೈತ ಚನ್ನಬಸಪ್ಪ ಕೊಂಬಳಿ, ಧಾರವಾಡ ಕೃಷಿ ವಿ.ವಿ.ಯ ವಿಸ್ತರಣಾ ನಿರ್ದೇಶಕ ಡಾ. ಆರ್‌ಆರ್ ಪಾಟೀಲ, ಜಿ.ಪಂ. ಸಿಇಒ ಸಿ.ಟಿ. ಶಿಲ್ಪಾನಾಗ್, ಕೇಂದ್ರದ ಮುಖ್ಯಸ್ಥ ಡಾ.ಪಿ.ಅಶೋಕ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಇದ್ದಾರೆ

ಹಾವೇರಿ: ರಾಣೆಬೆನ್ನೂರು ತಾಲ್ಲೂಕಿನ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರವು 32 ಸಿರಿಧಾನ್ಯಗಳನ್ನು ಸಂರಕ್ಷಣೆ ಮಾಡುತ್ತಿದ್ದು, ರೈತರ ಸಹಭಾಗಿತ್ವದಲ್ಲಿ ವಿಸ್ತರಣಾ ಚಟುವಟಿಕೆಗೆ ಮುಂದಾಗಿದೆ.

'ಈ ಧಾನ್ಯಗಳಲ್ಲಿ ಇಥಿಯೋಪಿಯಾದ 'ಟೆಫ್' ಮತ್ತು ಮೆಕ್ಸಿಕೊದ 'ಚಿಯಾ' ಕೂಡ ಇದೆ. ಅಳಿವಿನಂಚಿನಲ್ಲಿರುವ ಮುಳ್ಳು ನವಣೆ, ಕೆಂಪು ನವಣೆ, ಬೆಟ್ಟದ ಕೆಳಗಿನ ಸಾಮೆ, ಮಲ್ಲಿಗೆ ಸಾಮೆಯನ್ನೂ ಸಂರಕ್ಷಿಸಲಾಗುತ್ತಿದೆ. 'ಗ್ರಾಂ' ಲೆಕ್ಕದಲ್ಲಿ ಕೆಲವು ರೈತರಿಂದ ಪಡೆದ ಬೀಜಗಳನ್ನು ಕೇಂದ್ರದ ಪ್ರಾತ್ಯಕ್ಷಿಕೆ ಹೊಲದಲ್ಲಿ ಬೆಳೆದಿದ್ದೇವೆ. ಈಗ ಫಸಲು ಬಂದಿದೆ. ಈ ಪೈಕಿ ಒಂದಷ್ಟು ಸಂರಕ್ಷಿಸಿ ಇಡುತ್ತೇವೆ. ಉಳಿದುದನ್ನು ಆಸಕ್ತ ರೈತರಿಗೆ ನೀಡುತ್ತೇವೆ. ಆ ಮೂಲಕವೂ ಸಿರಿಧಾನ್ಯ ಸಂರಕ್ಷಣೆಯಾಗಲಿದೆ' ಎಂದು ಕೇಂದ್ರದ ಮುಖ್ಯಸ್ಥರಾದ ಹಿರಿಯ ವಿಜ್ಞಾನಿ ಡಾ. ಪಿ. ಅಶೋಕ ವಿವರಿಸಿದರು.

'ಸಿರಿಧಾನ್ಯ ಬೆಳೆಯುವ ಬಗೆ, ಅವುಗಳಲ್ಲಿರುವ ಉತ್ತಮ ಅಂಶಗಳು, ಬೆಳೆಯನ್ನು ಲಾಭದಾಯಕ ಮಾಡುವ ನಿಟ್ಟಿನಲ್ಲಿ ಅಧ್ಯಯನ ನಡೆಸುತ್ತಿದ್ದೇವೆ. ಎಂಥ ಕಠಿಣ ಸ್ಥಿತಿಯಲ್ಲೂ ಅವುಗಳನ್ನು ಬೆಳೆಯಬಹುದು. ನೀರು, ಗೊಬ್ಬರ ಇತ್ಯಾದಿಗಳ ಅಗತ್ಯ ಕಡಿಮೆ' ಎಂದರು.

'ಸಂಸ್ಕರಣೆಯು ಸ್ವಲ್ಪ ಕ್ಲಿಷ್ಟಕರವಾದ ಕಾರಣ ರೈತರು ಬೆಳೆಯುವುದನ್ನು ಬಿಟ್ಟಿದ್ದಾರೆ. ಹೀಗಾಗಿ ಕೇಂದ್ರದಲ್ಲಿ ಸಂಸ್ಕರಣಾ ಘಟಕ ಶೀಘ್ರವೇ ಕಾರ್ಯಾರಂಭ ಮಾಡಲಿದೆ' ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ. ಆರ್.ಆರ್. ಪಾಟೀಲ ತಿಳಿಸಿದರು.

'ನಮ್ಮ ಪೂರ್ವಜರು ಸಿರಿಧಾನ್ಯ ಬೆಳೆಯುತ್ತಿದ್ದು, ಸ್ವಾವಲಂಬಿಗಳಾಗಿದ್ದರು.ಜನ-ಜಾನುವಾರುಗಳಆರೋಗ್ಯ ಮಾತ್ರವಲ್ಲ ನೆಲ, ನೀರು, ಗಾಳಿ ಸೇರಿದಂತೆ ಪರಿಸರದ ಆರೋಗ್ಯವನ್ನೂ ಕಾಪಾಡುತ್ತದೆ. ದೇಹಕ್ಕೆ ಬೇಕಾದ ನಾರು, ಪೌಷ್ಟಿಕಾಂಶಗಳು ಇವೆ. ಆದರೆ, 'ಕ್ರಾಂತಿ'ಯ ಹೆಸರಿನಲ್ಲಿ ಬಂದ ಆಧುನಿಕ ಕೃಷಿ ಪದ್ಧತಿಯು 'ಸಾಮಾಜಿಕ ಸ್ವಾಸ್ಥ್ಯ'ಕ್ಕೇ ಹೊಡೆತ ನೀಡಿತು. ಈಗ ವಿಜ್ಞಾನಿಗಳೇ ಸಿರಿಧಾನ್ಯಗಳ ಸಂರಕ್ಷಣೆಗೆ ಮುಂದಾಗಿರುವುದು ಉತ್ತಮ ಬೆಳವಣಿಗೆ' ಎಂದು ಪ್ರಗತಿಪರ ರೈತ ಚನಬಸಪ್ಪ ಕೊಂಬಳಿ ಶ್ಲಾಘಿಸಿದರು.

ವಿಶೇಷ ಆಸ್ಥೆ ವಹಿಸಿ ಸಿರಿಧಾನ್ಯಗಳ ಸಂರಕ್ಷಣೆ ಮಾಡಿದ್ದೇವೆ. ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದೇವೆ

ಡಾ.ಪಿ. ಅಶೋಕ, ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃ.ವಿ.ಕೇ ಹನುಮನಮಟ್ಟಿ

'ಅತಿ ಬಡತನವಿದ್ದರೂ ಮೆಕ್ಸಿಕೋ, ಇಥಿಯೋಪಿಯಾ, ಜಮೈಕಾ ಮತ್ತಿತರ ದೇಶಗಳ ಜನತೆ ಓಟದಲ್ಲಿ ಮುಂದಿದ್ದಾರೆ. ಅಲ್ಲಿಯೂ ಸಿರಿಧಾನ್ಯಗಳೇ ಆಹಾರವಾಗಿದ್ದು, ವಂಶವಾಹಿಯೇ ಬಲಿಷ್ಠವಾಗಿದೆ. ನಮ್ಮ ರಾಜ್ಯದಲ್ಲೂ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಸಿರಿಧಾನ್ಯಗಳಿದ್ದವು' ಎಂದು ಕೊಂಬಳಿ ಹೇಳಿದರು.

ವಿಶ್ವ ಆಹಾರ ದಿನ

ಕೇಂದ್ರದಲ್ಲಿನ ಸಿರಿಧಾನ್ಯಗಳು

ಇಥಿಯೋಪಿಯಾದ 'ಟೆಫ್', ಮೆಕ್ಸಿಕೊದ 'ಚಿಯಾ' ಸೇರಿದಂತೆ ನವಣೆ, ತೆನಿ-07, ದೊಡ್ಡ ತಲೆ ನವಣೆ, ಸಣ್ಣ ನವಣೆ, ಮುಳ್ಳು ನವಣೆ, ಕೆಂಪು ನವಣೆ, ಕೆಂಪು ಹುಲ್ಲು ನವಣೆ, ನವಣೆ (ಕೊಂಬಳಿ), ಸಾಮೆ, ಬೆಟ್ಟದ ಕೆಳಗಿನ ಸಾಮೆ, ಹಾಲು ಸಾಮೆ, ಚನ್ನ ಸಾಮೆ, ಕಪ್ಪು ಸಾಮೆ, ಕರಿ ಸಾಮೆ, ಹರ ಸಾಮೆ, ಮಲ್ಲಿಗೆ ಸಾಮೆ, ರಾಜಗಿರಿ, ಸುವರ್ಣ ರಾಜಗಿರಿ, ಕೊರಲೆ, ಕೊರಲೆ (ಕೊಂಬಳಿ), ಹಾರಕ, ಹಾರಕ (ಕೊಂಬಳಿ), ಬರಗು, ಊದಲು (ಕೊಂಬಳಿ), ಊದರಲು, ರಾಗಿ, ದೊಡ್ಡ ರಾಗಿ, ಉಂಡೆರಾಗಿ, ರಾಗಿ ನಾಟಿಪದ್ಧತಿ ಹಾಗೂ ಸಜ್ಜೆ (ಕೊಂಬಳಿ).

ಪ್ರಜಾವಾಣಿ ಮಂಗಳವಾರ • ಅಕ್ಟೋಬರ್ 16, 2018 ಹಾವೇರಿ

ರಾಣೆಬೆನ್ನೂರು ತಾಲ್ಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರ ಯತ್ನ

32 ಸಿರಿಧಾನ್ಯಗಳ ಸಂರಕ್ಷಣೆ

• ಹರ್ಷವರ್ಧನ ಪಿ.ಆರ್.

ಹಾವೇರಿಯ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಈಚೆಗೆ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳನ್ನು ಪರಿಶೀಲಿಸುತ್ತಿರುವುದು. ಪ್ರಗತಿಪರ ರೈತ ಚನ್ನಬಸಪ್ಪ ಕೊಂಬಳಿ, ಧಾರವಾಡ ಕೃಷಿ ವಿ.ವಿ.ಯ ವಿಸ್ತರಣಾ ನಿರ್ದೇಶಕ ಡಾ. ಆರ್‌ಆರ್ ಪಾಟೀಲ, ಜಿ.ಪಂ. ಸಿಇಒ ಸಿ.ಟಿ. ಶಿಲ್ಪಾನಾಗ್, ಕೇಂದ್ರದ ಮುಖ್ಯಸ್ಥ ಡಾ.ಪಿ.ಅಶೋಕ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಇದ್ದಾರೆ

ಹಾವೇರಿ: ರಾಣೆಬೆನ್ನೂರು ತಾಲ್ಲೂಕಿನ ಹನುಮನಮಟ್ಟಿಯ ಕೃಷಿ ವಿಜ್ಞಾನ ಕೇಂದ್ರವು 32 ಸಿರಿಧಾನ್ಯಗಳನ್ನು ಸಂರಕ್ಷಣೆ ಮಾಡುತ್ತಿದ್ದು, ರೈತರ ಸಹಭಾಗಿತ್ವದಲ್ಲಿ ವಿಸ್ತರಣಾ ಚಟುವಟಿಕೆಗೆ ಮುಂದಾಗಿದೆ.

'ಈ ಧಾನ್ಯಗಳಲ್ಲಿ ಇಥಿಯೋಪಿಯಾದ 'ಟೆಫ್' ಮತ್ತು ಮೆಕ್ಸಿಕೊದ 'ಚಿಯಾ' ಕೂಡ ಇದೆ. ಅಳಿವಿನಂಚಿನಲ್ಲಿರುವ ಮುಳ್ಳು ನವಣೆ, ಕೆಂಪು ನವಣೆ, ಬೆಟ್ಟದ ಕೆಳಗಿನ ಸಾಮೆ, ಮಲ್ಲಿಗೆ ಸಾಮೆಯನ್ನೂ ಸಂರಕ್ಷಿಸಲಾಗುತ್ತಿದೆ. 'ಗ್ರಾಂ' ಲೆಕ್ಕದಲ್ಲಿ ಕೆಲವು ರೈತರಿಂದ ಪಡೆದ ಬೀಜಗಳನ್ನು ಕೇಂದ್ರದ ಪ್ರಾತ್ಯಕ್ಷಿಕೆ ಹೊಲದಲ್ಲಿ ಬೆಳೆದಿದ್ದೇವೆ. ಈಗ ಫಸಲು ಬಂದಿದೆ. ಈ ಪೈಕಿ ಒಂದಷ್ಟು ಸಂರಕ್ಷಿಸಿ ಇಡುತ್ತೇವೆ. ಉಳಿದುದನ್ನು ಆಸಕ್ತ ರೈತರಿಗೆ ನೀಡುತ್ತೇವೆ. ಆ ಮೂಲಕವೂ ಸಿರಿಧಾನ್ಯ ಸಂರಕ್ಷಣೆಯಾಗಲಿದೆ' ಎಂದು ಕೇಂದ್ರದ ಮುಖ್ಯಸ್ಥರಾದ ಹಿರಿಯ ವಿಜ್ಞಾನಿ ಡಾ. ಪಿ. ಅಶೋಕ ವಿವರಿಸಿದರು.

'ಸಿರಿಧಾನ್ಯ ಬೆಳೆಯುವ ಬಗೆ, ಅವುಗಳಲ್ಲಿರುವ ಉತ್ತಮ ಅಂಶಗಳು, ಬೆಳೆಯನ್ನು ಲಾಭದಾಯಕ ಮಾಡುವ ನಿಟ್ಟಿನಲ್ಲಿ ಅಧ್ಯಯನ ನಡೆಸುತ್ತಿದ್ದೇವೆ. ಎಂಥ ಕಠಿಣ ಸ್ಥಿತಿಯಲ್ಲೂ ಅವುಗಳನ್ನು ಬೆಳೆಯಬಹುದು. ನೀರು, ಗೊಬ್ಬರ ಇತ್ಯಾದಿಗಳ ಅಗತ್ಯ ಕಡಿಮೆ' ಎಂದರು.

'ಸಂಸ್ಕರಣೆಯು ಸ್ವಲ್ಪ ಕ್ಲಿಷ್ಟಕರವಾದ ಕಾರಣ ರೈತರು ಬೆಳೆಯುವುದನ್ನು ಬಿಟ್ಟಿದ್ದಾರೆ. ಹೀಗಾಗಿ ಕೇಂದ್ರದಲ್ಲಿ ಸಂಸ್ಕರಣಾ ಘಟಕ ಶೀಘ್ರವೇ ಕಾರ್ಯಾರಂಭ ಮಾಡಲಿದೆ' ಎಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ. ಆರ್.ಆರ್. ಪಾಟೀಲ ತಿಳಿಸಿದರು.

'ನಮ್ಮ ಪೂರ್ವಜರು ಸಿರಿಧಾನ್ಯ ಬೆಳೆಯುತ್ತಿದ್ದು, ಸ್ವಾವಲಂಬಿಗಳಾಗಿದ್ದರು.ಜನ-ಜಾನುವಾರುಗಳಆರೋಗ್ಯ ಮಾತ್ರವಲ್ಲ ನೆಲ, ನೀರು, ಗಾಳಿ ಸೇರಿದಂತೆ ಪರಿಸರದ ಆರೋಗ್ಯವನ್ನೂ ಕಾಪಾಡುತ್ತದೆ. ದೇಹಕ್ಕೆ ಬೇಕಾದ ನಾರು, ಪೌಷ್ಟಿಕಾಂಶಗಳು ಇವೆ. ಆದರೆ, 'ಕ್ರಾಂತಿ'ಯ ಹೆಸರಿನಲ್ಲಿ ಬಂದ ಆಧುನಿಕ ಕೃಷಿ ಪದ್ಧತಿಯು 'ಸಾಮಾಜಿಕ ಸ್ವಾಸ್ಥ್ಯ'ಕ್ಕೇ ಹೊಡೆತ ನೀಡಿತು. ಈಗ ವಿಜ್ಞಾನಿಗಳೇ ಸಿರಿಧಾನ್ಯಗಳ ಸಂರಕ್ಷಣೆಗೆ ಮುಂದಾಗಿರುವುದು ಉತ್ತಮ ಬೆಳವಣಿಗೆ' ಎಂದು ಪ್ರಗತಿಪರ ರೈತ ಚನಬಸಪ್ಪ ಕೊಂಬಳಿ ಶ್ಲಾಘಿಸಿದರು.

ವಿಶೇಷ ಆಸ್ಥೆ ವಹಿಸಿ ಸಿರಿಧಾನ್ಯಗಳ ಸಂರಕ್ಷಣೆ ಮಾಡಿದ್ದೇವೆ. ರೈತರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದೇವೆ

ಡಾ.ಪಿ. ಅಶೋಕ, ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃ.ವಿ.ಕೇ ಹನುಮನಮಟ್ಟಿ

'ಅತಿ ಬಡತನವಿದ್ದರೂ ಮೆಕ್ಸಿಕೋ, ಇಥಿಯೋಪಿಯಾ, ಜಮೈಕಾ ಮತ್ತಿತರ ದೇಶಗಳ ಜನತೆ ಓಟದಲ್ಲಿ ಮುಂದಿದ್ದಾರೆ. ಅಲ್ಲಿಯೂ ಸಿರಿಧಾನ್ಯಗಳೇ ಆಹಾರವಾಗಿದ್ದು, ವಂಶವಾಹಿಯೇ ಬಲಿಷ್ಠವಾಗಿದೆ. ನಮ್ಮ ರಾಜ್ಯದಲ್ಲೂ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಸಿರಿಧಾನ್ಯಗಳಿದ್ದವು' ಎಂದು ಕೊಂಬಳಿ ಹೇಳಿದರು.

ವಿಶ್ವ ಆಹಾರ ದಿನ

ಕೇಂದ್ರದಲ್ಲಿನ ಸಿರಿಧಾನ್ಯಗಳು

ಇಥಿಯೋಪಿಯಾದ 'ಟೆಫ್', ಮೆಕ್ಸಿಕೊದ 'ಚಿಯಾ' ಸೇರಿದಂತೆ ನವಣೆ, ತೆನಿ-07, ದೊಡ್ಡ ತಲೆ ನವಣೆ, ಸಣ್ಣ ನವಣೆ, ಮುಳ್ಳು ನವಣೆ, ಕೆಂಪು ನವಣೆ, ಕೆಂಪು ಹುಲ್ಲು ನವಣೆ, ನವಣೆ (ಕೊಂಬಳಿ), ಸಾಮೆ, ಬೆಟ್ಟದ ಕೆಳಗಿನ ಸಾಮೆ, ಹಾಲು ಸಾಮೆ, ಚನ್ನ ಸಾಮೆ, ಕಪ್ಪು ಸಾಮೆ, ಕರಿ ಸಾಮೆ, ಹರ ಸಾಮೆ, ಮಲ್ಲಿಗೆ ಸಾಮೆ, ರಾಜಗಿರಿ, ಸುವರ್ಣ ರಾಜಗಿರಿ, ಕೊರಲೆ, ಕೊರಲೆ (ಕೊಂಬಳಿ), ಹಾರಕ, ಹಾರಕ (ಕೊಂಬಳಿ), ಬರಗು, ಊದಲು (ಕೊಂಬಳಿ), ಊದರಲು, ರಾಗಿ, ದೊಡ್ಡ ರಾಗಿ, ಉಂಡೆರಾಗಿ, ರಾಗಿ ನಾಟಿಪದ್ಧತಿ ಹಾಗೂ ಸಜ್ಜೆ (ಕೊಂಬಳಿ).

3A ಹಾವೇರಿ ಗುರುವಾರ • ಅಕ್ಟೋಬರ್ 11, 2018 ಪ್ರಜಾವಾಣಿ

ಹನುಮನಮಟ್ಟಿ: ಸಿರಿಧಾನ್ಯ ಬೆಳೆಗಳಿಗೆ ಉತ್ಪಾದನಾ ತಾಂತ್ರಿಕತೆ ಕುರಿತ ತರಬೇತಿ, ಸಿಇಒ ನಾಗ್ ಅನಿಸಿಕೆ

ಅಧಿಕ ಬೆಲೆ ಆಹಾರವೇ ಅತ್ಯುತ್ತಮ ಅಲ್ಲ

ಪ್ರಜಾವಾಣಿ ವಾರ್ತೆ

ಹನುಮನಮಟ್ಟಿ (ಹಾವೇರಿ ಜಿಲ್ಲೆ): 'ಅಧಿಕ ಬೆಲೆ ಇರುವುದೆಲ್ಲ ಅತ್ಯುತ್ತಮ ಆಹಾರವಲ್ಲ' ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಹೇಳಿದರು.

ಇಲ್ಲಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬುಧವಾರ 'ಸಿರಿಧಾನ್ಯ ಬೆಳೆಗಳಿಗೆ ಉತ್ಪಾದನಾ ತಾಂತ್ರಿಕತೆ ಕುರಿತ ತರಬೇತಿ'ಯನ್ನು ಮಡಕೆಗೆ ಸಿರಿಧಾನ್ಯ ಸುರಿಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್ಚಿನ ಬೆಲೆಯ ಹಾಗೂ ಪ್ರತಿಷ್ಠೆಯ ಆಹಾರವೇ ಉತ್ತಮ ಎಂಬ ಭ್ರಮೆಯನ್ನು ಬಿಡಬೇಕು. ಆರೋಗ್ಯಕ್ಕೆ ಪೂರಕವಾದ ಆಹಾರಕ್ಕೆ ಒತ್ತು ನೀಡಬೇಕು ಎಂದ ಅವರು, 'ಸಿರಿ' ಎಂದರೆ 'ಶ್ರೀ', ಅರ್ಥಾತ್ 'ಲಕ್ಷ್ಮೀ'. ಹೀಗಾಗಿ, ಸಿರಿಧಾನ್ಯ ಆರೋಗ್ಯದ ಸಿರಿತನ ಹೆಚ್ಚಿಸುತ್ತದೆ ಎಂದರು.

ಅಧಿಕ ನೀರು, ರಾಸಾಯನಿಕ, ಕೀಟನಾಶಕ ಬಳಸುವ ಆಹಾರ ಬೆಳೆಗಳೂ ಒಳ್ಳೆಯದಲ್ಲ. ಸಾವಯವ ಕೃಷಿ ನೆಲ, ನೀರು ಹಾಗೂ ನಮ್ಮ ಆರೋಗ್ಯಕ್ಕೆ ಹಿತಕರ. ಸಿರಿಧಾನ್ಯದ ಮೌಲ್ಯವರ್ಧನೆ ಮೂಲಕ ಆರೋಗ್ಯವಂತ ಆಹಾರ ಉತ್ಪಾದನೆಗೆ ಜಿಲ್ಲೆಯಲ್ಲಿ ಪ್ರಯತ್ನ ನಡೆಯುತ್ತಿದೆ ಎಂದು ವಿವರಿಸಿದರು.

ಯಾವುದೇ ಕೃಷಿ ಉತ್ಪನ್ನದ ಬಗ್ಗೆ ಹೊಲದಿಂದ ಮಾರುಕಟ್ಟೆ ತನಕ ಕಾಳಜಿ ವಹಿಸಿದಾಗ ಮಾತ್ರ 'ಮೌಲ್ಯವರ್ಧನೆ' ಸಾಧ್ಯ ಎಂದ ಅವರು, ಈ ನಿಟ್ಟಿನಲ್ಲಿ ಸಿರಿಧಾನ್ಯಗಳ ಬಗ್ಗೆ ಬೀಜದಿಂದ ಉತ್ಪನ್ನ ತಯಾರಿ ತನಕ ನಿಗಾ ವಹಿಸಲಾಗುತ್ತಿದೆ ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ ಮಾತನಾಡಿ, 'ಕಿರುಧಾನ್ಯ'ಗಳೇ ಇಂದು 'ಸಿರಿಧಾನ್ಯ'ವಾಗಿದ್ದು, ಹೆಸರು ಮಾತ್ರವಲ್ಲ, ಆರೋಗ್ಯದ ದೃಷ್ಟಿಯಿಂದಲೂ 'ಸಿರಿ' ಎನಿಸಿದೆ. ಆದರೆ, ಮಧುಮೇಹ, ರಕ್ತದೊತ್ತಡ ಮತ್ತಿತರ ಕಾಯಿಲೆಗಳು ಸಣ್ಣ ವಯಸ್ಸಿನಲ್ಲೇ ಆವರಿಸಿಕೊಳ್ಳಲು ಈಗಿರುವ ಆಹಾರ ಪದ್ಧತಿ ಮತ್ತು ಜೀವನ ಶೈಲಿ ಕಾರಣವಾಗಿದೆ. ಸಿರಿಧಾನ್ಯ ಸೇವನೆಯು ಆರೋಗ್ಯಕ್ಕೆ ಪೂರಕವಾಗಿದೆ ಎಂದರು.

ಪ್ರಗತಿಪರ ರೈತ ಚನ್ನಬಸಪ್ಪ ಕೊಂಬಳಿ ಮಾತನಾಡಿ, 'ಸಿರಿಧಾನ್ಯವು ಕೇವಲ ಮನುಷ್ಯನ ಆರೋಗ್ಯ ಮಾತ್ರವಲ್ಲ, ನೆಲ, ನೀರು, ಗಾಳಿ, ಜಾನುವಾರು, ಪಶು-ಪಕ್ಷಿ ಸಂಕುಲ ಸೇರಿ ಪ್ರಕೃತಿಯ ಸ್ವಾಸ್ಥ್ಯವನ್ನು ಕಾಪಾಡುತ್ತದೆ' ಎಂದರು.

ಕೇಂದ್ರದ ಮುಖ್ಯಸ್ಥ ಡಾ.ಪಿ. ಅಶೋಕ, ಶಾಂತಮ್ಮ ಕರ್ಜಗಿ, ವಿರೂಪಾಕ್ಷಪ್ಪ, ಮಂಜುನಾಥ ಇದ್ದರು.

20 ದಿನಗಳ ಒಳಗಾಗಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸಿರಿಧಾನ್ಯ ಸಂಸ್ಕರಣಾ ಘಟಕ ಕಾರ್ಯ ಆರಂಭಿಸಲು ಕ್ರಮ ವಹಿಸಬೇಕು

ಡಾ.ಆರ್.ಆರ್.ಪಾಟೀಲ

ವಿಸ್ತರಣಾ ನಿರ್ದೇಶಕ, ಕೃ.ವಿ.ವಿ.ಧಾರವಾಡ

ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿರುವ ಸಿರಿಧಾನ್ಯ ಬೆಳೆಗಳನ್ನು ಬುಧವಾರ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಟಿ.ಶಿಲ್ಪಾನಾಗ್ ವೀಕ್ಷಿಸಿದರು. ಪ್ರಗತಿ ಪರ ರೈತ ಚನ್ನಬಸಪ್ಪ ಕೊಂಬಳಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಆರ್‌ಆರ್‌ಪಾಟೀಲ, ಕೇಂದ್ರದ ಮುಖ್ಯಸ್ಥ ಡಾ.ಪಿ.ಅಶೋಕ ಇದ್ದಾರೆ

ನಮ್ಮ ಹಾವೇರಿ ಗುರುವಾರ, 11 ಅಕ್ಟೋಬರ್ 2018, ಹುಬ್ಬಳ್ಳಿ ವಿಜಯ ಕರ್ನಾಟಕ

ವಿಸ್ತರಣಾ ನಿರ್ದೇಶಕ ಆರ್.ಆರ್.ಪಾಟೀಲ್ ಭರವಸೆ

ಸಿರಿಧಾನ್ಯ ಸಂಸ್ಕರಣಾ ಘಟಕ ಶೀಘ್ರ ಆರಂಭ

▪ ವಿಕ ಸುದ್ದಿಲೋಕ ಕಾಕೋಳ

ಸಿರಿ ಅಂದರೆ ಆಹಾರ ಪದ್ಧತಿಯಲ್ಲಿ ಸಂಪತ್ತು, ಪಾಲಿಶ್ ಮಾಡಿದ ಅಕ್ಕಿಯನ್ನು ಹೆಚ್ಚು ಹಣ ಕೊಟ್ಟು ತಿನ್ನುವ ರೂಢಿ ಬೆಳೆದಿದೆ. ಆದರೆ ಸಿರಿಧಾನ್ಯವನ್ನು ಮರೆಯುತ್ತಿದ್ದಾರೆ ಎಂದು ಜಿ.ಪಂ. ಸಿಇಒ ಶಿಲ್ಪಾನಾಗ್ ವಿಷಾದಿಸಿದರು.

ರಾಣೇಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬುಧವಾರ ನಡೆದ ಐ.ಸಿ.ಆರ್. ಸಿರಿಧಾನ್ಯ ಬೆಳೆಗಳಲ್ಲಿ ಉತ್ಪಾದನಾ ತಾಂತ್ರಿಕತೆ ಕುರಿತು ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದು ತರಕಾರಿಗಳನ್ನು ಸಹ ತಿನ್ನದ ಹಾಗೆ ವಾತಾವರಣ ಸೃಷ್ಟಿಯಾಗಿದೆ. ಪ್ರತಿಯೊಂದರಲ್ಲಿ ಕ್ರಿಮಿನಾಶಕ ಸಿಂಪರಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಶೇ.85 ಜನರು ವ್ಯವಸಾಯವನ್ನೇ ಅವಲಂಬಿಸಿದ್ದಾರೆ. 7 ತಾಲೂಕುಗಳಲ್ಲಿ ಆಯ್ದ ರೈತರಿಂದ ತರಬೇತಿ ನೀಡಲು ನೇಮಕ ಮಾಡಲಾಗಿದ್ದು, 100 ಹೆಕ್ಟೇರ್ ಜಾಗ ಆಯ್ಕೆ ಮಾಡಲಾಗಿದೆ. ಅದೇ ರೀತಿ ಸಿರಿಧಾನ್ಯ ಬೆಳೆದ ರೈತರಿಗೆ ಎಪಿಎಂಸಿ ದರದಲ್ಲಿ ಬೆಲೆ ನೀಡಲಾಗುವುದು ಎಂದು ರೈತರಿಗೆ ಮಾಹಿತಿ ನೀಡಿದರು.

ಜಿಲ್ಲಾ ಜಂಟಿ ನಿರ್ದೇಶಕ ಮಂಜುನಾಥ ಮಾತನಾಡಿ, ಪೋಷಕಾಂಶ ಇಲ್ಲದ ಪದಾರ್ಥ ತಿನ್ನುತ್ತಿರುವುದರಿಂದ ಸಕ್ಕರೆ ಕಾಯಿಲೆ, ರೋಗ ನಿರೋಧಕ ಶಕ್ತಿ ಕಳೆದುಕೊಂಡು ಹೃದಯ ಸಂಬಂಧಿ ಕಾಯಿಲೆ ಬರುತ್ತಿವೆ. ದೈನಂದಿನ ಆಹಾರದಲ್ಲಿ ಸಿರಿಧಾನ್ಯ ಇರಬೇಕು. ಅನ್ಯ ರಾಜ್ಯದಲ್ಲಿ ಅತಿ ಹೆಚ್ಚು ಮ್ಯಾರಥಾನ್ ಪಟುಗಳು ಇರುವುದಕ್ಕೆ ಕಾರಣ ಅವರು ಸೇವಿಸುತ್ತಿರುವ ಇಂತಹ ಆಹಾರ ಕ್ರಮಗಳ ಅನುಕರಣೆಯಿಂದ. ಜಿಲ್ಲೆಯಲ್ಲಿ ಸಿರಿಧಾನ್ಯ ಮಾರುಕಟ್ಟೆ ಮಾಡುವ ಉದ್ದೇಶ ಹೊಂದಲಾಗಿದೆ. 700 ಹೆಕ್ಟೇರ್ ಜಾಗದಲ್ಲಿ ಸಿರಿಧಾನ್ಯ ಸಂಸ್ಕರಣೆ ಮಾಡಲಾಗುತ್ತದೆ ಎಂದು ವಿವರಿಸಿದರು.

ಸಾವಯವ ಕೃಷಿಕ ಚೆನ್ನಬಸಪ್ಪ ಕೊಂಬಳಿ ಮಾತನಾಡಿ, ಹಿಂದೆ ಕೊರಲು ಮುಖ್ಯ ಆಹಾರವಾಗಿತ್ತು, ಆಧುನಿಕತೆಯ ಪರಿಣಾಮದಿಂದ ಈ ಬೆಳೆ ಕಡಿಮೆಯಾಗಿದೆ. ಇಂದು ಆಧುನಿಕತೆಯ ಭರಾಟೆಯಲ್ಲಿ ಜನ ರಾಗಿ ಮುದ್ದೆ ಎಂದರೆ ಜಿಗುಪ್ಸೆಗೊಳ್ಳುವಂತ ಪರಿಸ್ಥಿತಿ ಬಂದಿದೆ. ವಾಣಿಜ್ಯ ಬೆಳೆಯಲ್ಲಿ ಒಂದೇ ಬೆಳೆಯನ್ನು ಪ್ರತಿ ವರ್ಷ ಬೆಳೆಯುತ್ತಿರುವುದರಿಂದ ಭೂಮಿಯು ರೋಗ ನಿರೋಧಕ ಶಕ್ತಿ ಕಳೆದುಕೊಳ್ಳುತ್ತಿದೆ. ಇದರಿಂದ ಮಹಿಳೆಯರಲ್ಲಿ ನಿಶ್ಶಕ್ತಿ, ಎದೆ ಹಾಲಿನ ಕೊರತೆ, ಬಿಪಿ, ಶುಗರ್ ಇತ್ಯಾದಿ ಸಮಸ್ಯೆಗಳು ಎದುರಾಗುತ್ತಿವೆ.

ವಿಸ್ತರಣಾ ನಿರ್ದೇಶಕ ಆರ್.ಆರ್.ಪಾಟೀಲ್ ಮಾತನಾಡಿ, ರೈತರಿಗೆ ತಾಂತ್ರಿಕತೆಯ ಜ್ಞಾನ, ಜಾಗೃತಿ ಅವಶ್ಯಕ. ಈ ಭಾಗದ ರೈತರಿಗೆ ಯಾವ ಬೆಳೆ ಅವಶ್ಯ ಎಂದು ತಿಳಿದುಕೊಂಡು ವ್ಯವಸಾಯ ಮಾಡುವುದು ಉತ್ತಮ, ಎಂತಹ ಬರಗಾಲದಲ್ಲೂ ರೈತನ ಕೈ ಹಿಡಿಯುವುದು ಸಿರಿಧಾನ್ಯ. ಈ ಭಾಗದಲ್ಲಿ ಸಂಸ್ಕರಣಾ ಘಟಕ ಅವಶ್ಯಕವಾಗಿದೆ. ಶೀಘ್ರದಲ್ಲಿಯೇ ಕೆ.ವಿ.ಕೆ ಯಲ್ಲಿ ಸಂಸ್ಕರಣಾ ಘಟಕ ಆರಂಭವಾಗುತ್ತದೆ ಎಂದು ಭರವಸೆ ನೀಡಿದರು.

ಟೆಫ್, ಚಿಯಾ ಬೆಳೆ ಯಶಸ್ವಿ: ಸಿರಿಧಾನ್ಯಗಳಲ್ಲಿ ಒಂದಾದ ಇಥಿಯೋಪಿಯಾದಲ್ಲಿ ಪ್ರಮುಖ ಆಹಾರವಾಗಿರುವ 'ಟೆಫ್' ಹಾಗೂ ಮೆಕ್ಸಿಕೋ ಮತ್ತು ದಕ್ಷಿಣ ಅಮೇರಿಕ ಮೂಲದ ಪೌಷ್ಟಿಕ ಆಹಾರ ಧಾನ್ಯವಾಗಿರುವ 'ಚಿಯಾ' ಬೆಳೆಯನ್ನು ಪರಿಚಯಿಸಲು ಹನುಮನಮಟ್ಟಿ ಕೃಷಿ ವಿಜ್ಞಾನಕೇಂದ್ರ ಯಶಸ್ವಿಯಾಗಿದ್ದು ನವಣೆ, ಸಾಮೆ, ಬರಗು, ಊದಲು, ರಾಗಿ, ಕರಿ ಸಾಮೆ, ಹಾಲು ಸಾಮೆ, ಮುಳ್ಳು ನವಣೆ, ಕೆಂಪು ನವಣೆ, ಕೊರಲೆ, ಹಾರಕ, ಚಿಯಾ ಹೀಗೆ ಸುಮಾರು 34 ವಿವಿಧ ಬಗೆಯ ಸಿರಿಧಾನ್ಯಗಳನ್ನು ಬೆಳೆಯುವುದರಲ್ಲಿ ಯಶಸ್ವಿಯಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಜಿಲ್ಲೆಯ ವಿವಿಧ ತಾಲೂಕಿನಿಂದ ಸಾವಯವ ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡರು. ಹಿರಿಯ ವಿಜ್ಞಾನಿ ಡಾ.ಅಶೋಕ ಪ್ರಾಸ್ತಾವಿಕ ಮಾತನಾಡಿದರು. ಕೆ.ಪಿ. ಗುಂಡಣ್ಣನವರ ಸ್ವಾಗತಿಸಿ, ವಂದಿಸಿದರು, ಈರಣ್ಣ, ಶಾಂತಮ್ಮ ಕರ್ಜಗಿ, ಕರಬಸನಗೌಡರ, ನಾಗಪ್ಪ ನಿಂಬೆಗೊಂದಿ, ಜಯಮ್ಮ ಚನ್ನಗೌಡರ ಮತ್ತಿತರರು ಹಾಜರಿದ್ದರು.

ರಾಣೇಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಐ.ಸಿ.ಆರ್. ಸಿರಿಧಾನ್ಯ ಬೆಳೆಗಳಲ್ಲಿ ಉತ್ಪಾದನಾ ತಾಂತ್ರಿಕತೆ ಕುರಿತು ನಡೆದ ತರಬೇತಿ ಕಾರ್ಯಾಗಾರದಲ್ಲಿ ಶಿಲ್ಪಾನಾಗ್ ಹಾಗೂ ವಿಜ್ಞಾನಿಗಳು ಸಿರಿಧಾನ್ಯ ಬೆಳೆಗಳನ್ನು ವೀಕ್ಷಿಸಿದರು.

ಹಾವೇರಿ

ಬುಧವಾರದ ಉಷ್ಣಾಂಶ 31° ಗರಿಷ್ಠ 21° ಕನಿಷ್ಠ

ಪನಾಮ ರೋಗ ನಿಯಂತ್ರಣಕ್ಕೆ ಹನುಮನಮಟ್ಟಿಯ ಕೃಷಿ ವಿಜ್ಞಾನಿ ಪ್ರಯೋಗ

ಬಾಳೆ ಗಿಡಕ್ಕೂ ಬಂತು ಚುಚ್ಚುಮದ್ದು!

■ ಹರ್ಷವರ್ಧನ ಪಿ.ಆರ್.

ತರಹೇವಾರಿ ಉತ್ಪನ್ನ

ಮುಖ್ಯಾಂಶಗಳು

ತಮಿಳುನಾಡಿನ ಸಿರಿಂಜ್

ಪ್ರಜಾವಾಣಿ ವಿಶೇಷ

ಬುಧವಾರದ ಉಷ್ಣಾಂಶ 28° ಗರಿಷ್ಠ 21° ಕನಿಷ್ಠ

ಗುರುವಾರ 30° 20° ಶುಕ್ರವಾರ 31° 20° ಶನಿವಾರ 32° 20°

ವಿಶ್ವ ಮಣ್ಣು ದಿನಾಚರಣೆ ಇಂದು

ಮಣ್ಣಿನ ಮಾಲಿನ್ಯ; ಜಾಗೃತಿ ಅಗತ್ಯ

■ ಹರ್ಷವರ್ಧನ ಪಿ.ಆರ್.

ಮಣ್ಣಿನ ಮಾಲಿನ್ಯಕ್ಕೆ ಕಾರಣವಾಗುವ ಅಂಶಗಳು

'ಮಣ್ಣಿನ ಗುಣಧರ್ಮ ಕಾಪಾಡೋಣ'

ಸುರಕ್ಷಿತ ಆಹಾರ ಸೇವನೆಗೆ ಆದ್ಯತೆ ನೀಡಿ

■ ವಿಕ ಸುದ್ದಿಲೋಕ ಕಾಕೋಳ

ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಆಹಾರ ದಿನವನ್ನು ಆಚರಿಸಲಾಯಿತು.

ಹಿರಿಯ ವಿಜ್ಞಾನಿ ಅಶೋಕ ಪಿ. ಮಾತನಾಡಿ, ವಿಶ್ವ ಆಹಾರ ದಿನಾಚರಣೆಯನ್ನು ಆಹಾರ ಮತ್ತು ಕೃಷಿ ಸಂಸ್ಥೆಯು 1945ರ ಅಕ್ಟೋಬರ್ 16ರಂದು ಆರಂಭಿಸಿತು. ಅದ್ದರಿಂದ ಪ್ರತಿ ಅಕ್ಟೋಬರ್ 16ನ್ನು ವಿಶ್ವ ಆಹಾರ ದಿನವನ್ನಾಗಿ ಪ್ರಪಂಚದ್ಯಾಂತ ಆಚರಿಸುತ್ತಾರೆ ಎಂದು ವಿವರಿಸಿದರು.

ಈ ವರ್ಷದ ವಿಶ್ವ ಆಹಾರ ದಿನಾಚರಣೆ ವ್ಯಾಖ್ಯಾನವನ್ನು ಆಹಾರ ಮತ್ತು ಕೃಷಿ ಸಂಸ್ಥೆಯು 'ಶೂನ್ಯ ಹಸಿವು' ಎಂದು ಘೋಷಿಸಿದೆ. ಎಲ್ಲರಿಗೂ ಸುರಕ್ಷಿತ ಆಹಾರ ಒದಗಿಸಿ, ಎಲ್ಲರನ್ನು ಹಸಿವಿನಿಂದ ಮುಕ್ತಗೊಳಿಸಿ ಶ್ರೀಮಂತ ಪ್ರಪಂಚವನ್ನು ನಿರ್ಮಿಸುವ ಗುರಿಯನ್ನು ವಿಶ್ವಸಂಸ್ಥೆ ಹೊಂದಿದೆ ಎಂದರು.

ರಾಣೆಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇತ್ತೀಚೆಗೆ ವಿಶ್ವ ಆಹಾರ ದಿನವನ್ನು ಆಚರಿಸಲಾಯಿತು.

ವಿಶ್ವ ಆಹಾರ ದಿನಾಚರಣೆ ಮುಖ್ಯ ಉದ್ದೇಶವೇನೆಂದರೆ ಪ್ರಪಂಚದ ಪ್ರತಿಯೊಬ್ಬರಿಗೂ ಆಹಾರ ಸಿಗಬೇಕು ಮತ್ತು ಹಸಿವಿನಿಂದ ಮುಕ್ತರಾಗಬೇಕು ಎನ್ನುವುದು. ವಿಶ್ವ ಆಹಾರ ದಿನವನ್ನು ಭಾರತದಲ್ಲಿ ಉತ್ಸಾಹದಿಂದ ಆಚರಿಸಲಾಗುತ್ತದೆ ಎಂದರು.

ಮಣ್ಣು ವಿಜ್ಞಾನಿ ಡಾ.ಕುಮಾರ ಬಿ. ಎಚ್. ಮಾತನಾಡಿ, ವಿಶ್ವ ಆಹಾರ ದಿನಾಚರಣೆ ಒಂದು ಮುಖ್ಯ ಕಾರ್ಯಕ್ರಮವಾಗಿದ್ದು ಹಿಂದಿನ ಮತ್ತು ಈಗಿನ ಆಹಾರದ ಬಗ್ಗೆ ವಾಸ್ತವಿಕ ಸಂಗತಿ ತಿಳಿಸಿ ಹೇಳಿದರು.

ಡಾ.ಕೆ.ಪಿ. ಗುಂಡಣ್ಣವರ ಮಾತನಾಡಿ, ಇವತ್ತಿನ ಆಹಾರದ ಸಂರಕ್ಷಣೆ ಮತ್ತು ಆಹಾರದ ಬೆಳೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹಂಚಿಕೊಂಡರು. ತೋಟಗಾರಿಕೆ ವಿಜ್ಞಾನಿ ಹರೀಶ ಡಿ.ಕೆ. ತೋಟಗಾರಿಕೆ ಬೆಳೆಗಳ ಮಹತ್ವದ ಬಗ್ಗೆ ಮಾತನಾಡಿದರು. ಆಯೋಜಕರಾದ ಡಾ.ಶಿವಮೂರ್ತಿ ಡಿ. ವಿಶ್ವ ಆಹಾರದ ದಿನಾಚರಣೆಯಲ್ಲಿ ತೃಣಮೂಲ ಧಾನ್ಯಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು. ಡಾ.ಶಿವಮೂರ್ತಿ ಡಿ. ನಿರೂಪಿಸಿ ವಂದಿಸಿದರು.

ಏರ್ಪಡಿಸಿದ್ದ 6 ಸಾವಿರ ಮಹಿಳೆಯರಿಗೆ ... ಇದೇ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ... ಉಪಸ್ಥಿತರಿದ್ದರು.

ಮಣ್ಣು ಪರೀಕ್ಷೆಯಿಂದ ಉತ್ತಮ ಫಸಲು

■ ವಿಕ ಸುದ್ದಿಲೋಕ ಕಾಕೋಳ

ಮಣ್ಣಿನ ಪರೀಕ್ಷೆ ಮಾಡಿಸಿ ಅದಕ್ಕೆ ತಕ್ಕಂತೆ ಬೀಜ ಬಿತ್ತಿದರೆ ಉತ್ತಮ ಫಸಲು ಪಡೆಯಬಹುದು ಎಂದು ಜಿಪಂ ಅಧ್ಯಕ್ಷ ಎಸ್.ಕೆ.ಕರಿಯಣ್ಣನವರ ಹೇಳಿದರು.

ರಾಣೆಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿ.ಪಂ, ಕೃಷಿ ಇಲಾಖೆ, ಕೃಷಿ ವಿ.ವಿ ಧಾರವಾಡ ಸಂಯುಕ್ತ ಆಶ್ರಯದಲ್ಲಿ ಬುಧವಾರ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ರಾಣೆಬೆನ್ನೂರ ತಾಲೂಕಿನ ಹನುಮನಮಟ್ಟಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮವನ್ನು ಜಿ.ಪಂ ಅಧ್ಯಕ್ಷ ಎಸ್.ಕೆ ಕರಿಯಣ್ಣನವರ ಬುಧವಾರ ಉದ್ಘಾಟಿಸಿದರು.

> ಕಬ್ಬು ಬೆಳೆಗಾರರು ಬೆಳೆ ಕಟಾವ್ ನಂತರ ರೌದಿ ಸುಡುತ್ತಿದ್ದು ಮಣ್ಣಿನ ಶಕ್ತಿ ಕುಂಠಿತಗೊಳ್ಳುತ್ತದೆ. ರೌದಿಯನ್ನು ಗುಂಡಿಯಲ್ಲಿ ಹಾಕಿ ಅದಕ್ಕೆ ಮಣ್ಣು ಮತ್ತು ಕೊಂಚ ನೀರು ಬಿಟ್ಟರೆ ಅದು ಡಿಕಾಂಪೋಸ್ ಆಗಿ ಗೊಬ್ಬರವಾಗಿ ಮಾರ್ಪಾಡುತ್ತದೆ.
>
> -ಡಾ.ಅಶೋಕ ಪಿ., ಹಿರಿಯ ವಿಜ್ಞಾನಿ, ಕೆ.ವಿ.ಕೆ ಹನುಮನಮಟ್ಟಿ

ಹಿಂದೆ ರೈತರು ಸಾಕಷ್ಟು ರಾಗಿ, ನವಣೆ, ಸಜ್ಜೆ, ಉದಲು, ಹಾರಕಗಳಂತಹ ಸಿರಿಧಾನ್ಯದ ಬೆಳೆಗಳನ್ನು ಬೆಳೆದು ಸೇವಿಸುತ್ತಿದ್ದರಿಂದ ಯಾವ ಕಾಯಿಲೆಯೂ ಬರುತ್ತಿರಲಿಲ್ಲ. ಈಗ ಸಾಕಷ್ಟು ರಾಸಾಯನಿಕ ಗೊಬ್ಬರಗಳ ಸಿಂಪಡಣೆಯಿಂದಾಗಿ ಸತ್ವಯುತ ಆಹಾರ ಪಡೆಯಲಾಗುತ್ತಿಲ್ಲ. ಆದ್ದರಿಂದ ಮಣ್ಣಿನ ಪರೀಕ್ಷೆ ಮಾಡಿಸಿ ಅದಕ್ಕೆ ತಕ್ಕಂತೆ ಬೀಜ, ಗೊಬ್ಬರ ಬಳಸಬೇಕು ಎಂದರು. ಜಿಪಂ ಸದಸ್ಯೆ ಕೆ.ಲೀಲಾವತಿ ಮಾತನಾಡಿ, ಹೆಚ್ಚಿನ ರಾಸಾಯನಿಕ ಸಿಂಪಡಣೆ ಮಾಡುತ್ತಿರುವುದರಿಂದ ಭೂಮಿ ಬಂಜರಾಗುತ್ತದೆ. ಹಾಗಾಗಿ ನಾಜೂಕಿನಿಂದ ಮಿಶ್ರ ಬೆಳೆ ಬೆಳೆಯುವುದರ ಜತೆಗೆ ಉಪ ಕಸುಬಾಗಿ ಕೋಳಿ ಸಾಕಣೆ, ಹೈನುಗಾರಿಕೆ ಕಡೆಗೂ ಆಸಕ್ತಿ ತೋರಬೇಕು ಎಂದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಮೂಕಪ್ಪ ಪೂಜಾರ ಮಾತನಾಡಿ, ಮುಂದಿನ ಪೀಳಿಗೆಗೆ ಕೃಷಿ ಬದುಕು ಸಹಕಾರಿಯಾಗಬೇಕಾದರೆ ಮಣ್ಣಿನ ಫಲವತ್ತತೆ ಕಾಪಾಡಬೇಕು ಎಂದರು.

ಕೃಷಿ ಮಹಾವಿದ್ಯಾಲಯದ ಡೀನ್ ಡಾ.ಚಿದಾನಂದ ಮನ್ಸೂರ್ ಮಾತನಾಡಿ, ರೈತರು ಮಣ್ಣಿನ ಅಂಶ ಅರಿತು ವ್ಯವಸಾಯ ಮಾಡಬೇಕುಎಂದರು.

ಆರ್.ಜಿ.ಗೊಲ್ಲರ, ಕುಮಾರ ಬಿ. ಎಚ್, ಜಿ.ಪಂ ಸದಸ್ಯೆ ಮಂಗಳಗೌರಿ ಅರುಣಕುಮಾರ, ಸುಮಂಗಲಾ ರವೀಂದ್ರ ಪಟ್ಟಣಶೆಟ್ಟಿ, ನೀಲವ್ವ ಈರಪ್ಪ ಬುಡಪನಹಳ್ಳಿ, ನಾಗಪ್ಪ ಕಳ್ಳಿಮನಿ, ಎಮ್.ಎಚ್ ಪಾಟೀಲ್, ಚನ್ನಬಸಪ್ಪ ಕೊಂಬಳಿ, ರೈತರು ಪಾಲ್ಗೊಂಡಿದ್ದರು. ಜಿಲ್ಲಾ ಜಂಟಿ ಕೃ.ನಿ ಮಂಜುನಾಥ ಬಿ ಪ್ರಾಸ್ತಾವಿಕ ಮಾತನಾಡಿದರು. ಡಾ.ಅಶೋಕ ಸ್ವಾಗತಿಸಿದರು. ಡಾ. ಕೆ.ಪಿ.ಗುಂಡಣ್ಣನವರ ನಿರೂಪಿಸಿ ವಂದಿಸಿದರು.

SWTL Activities

Soil and Water Testing Lab

Soil analysis progress report (2018-19)

Month	No of Samples	No. of farmers	No of Villages	Amount (Rs.)
April	102	102	16	6500
May	18	18	15	2720
June	15	15	12	1870
July	12	12	5	880
August	65	65	36	12350
September	89	89	68	5010
October	22	22	12	1240
November	55	55	38	3870
December	139	139	69	9230
January	217	217	55	13230
February	615	615	210	50070
March	770	770	213	40460
Total	2119	2119	748	147430

Soil and Water Testing Lab

Water analysis Progress report

Month	No of Samples	No. of farmers	No of Villages	Amount (Rs.)
April	67	67	48	3350
May	12	12	8	600
June	5	5	3	250
July	11	11	5	550
August	0	0	0	0
September	94	94	69	4700
October	22	22	12	1100
November	47	47	20	2350
December	131	131	109	6550
January	201	201	55	10050
Februvary	485	485	210	24250
March	756	756	210	37800
Total	1831	1831	749	91550

Soil Health Card Nutrients

Month	No of Samples
April	10
May	13
June	8
July	2
August	65
September	4
October	1
November	8
December	12
January	17
Februvary	138
March	14
Total	292

Soil and Water Testing Lab 2018-19

Month	Details	No. of samples	Farmers Benefited	Village Nos.	Amount (Rs)	Additional Information
April	Soil	202	202	16	6500=00	92 pH, EC & 10 NPK
April	Water	67	67	48	3350=00	pH & EC
May	Soil	18	18	15	2720=00	05 pH, EC & 13 NPK
May	Water	12	12	08	600=00	pH & EC
June	Soil	15	15	12	1870=00	07 pH, EC & 8 NPK
June	Water	05	05	03	250=00	pH & EC
July	Soil	12	12	05	880=00	10 pH, EC & 02 NPK
July	Water	11	11	05	550=00	pH & EC
August	Soil	65	65	36	12350=00	-pH, EC & 65 NPK
August	Water	0	0	0	0	pH & EC Only
September	Soil	89	89	68	5010=00	85 pH, EC & 04 NPK
September	Water	94	94	69	4700=00	pH & EC Only
October	Soil	22	22	12	1240=00	01pH & Ec&21 NPK
October	Water	22	22	12	1100=00	pH & Ec only
November	Soil	55	55	38	3870=00	47pH, Ec only&05 NPK
November	Water	47	47	20	2350=00	pH & EC Only
December	Soil	139	139	69	9230=00	127 pH & Ec&12 NPK
December	Water	131	131	109	6550=00	pH & EC Only
January	Soil	217	217	55	13230=00	200 pH, EC17 NPK
January	Water	201	201	55	10050=00	pH & Ec only
February	Soil	615	615	210	50070=00	477 pH, EC&138 NPK
February	Water	485	485	210	24250=00	pH & EC Only
March	Soil	770	770	210	40460=00	756 pH, EC & 14 NPK
March	Water	756	756	210	37800=00	pH & EC Only
	Total					--

Soil parameters and Nutrient classification

Parameter	Group-1	Group-2	Group-3
pH	Acidic =<6.5	Neutral =6.5-7.5 (Best)	Alkaline=>7.5
EC	Normal=<2.0 dS/m (Best)	Towards salinity=2-4	Saline=>4.0 dS/m
OC	Low=<0.5%	Medium=0.5-0.75%	High =>0.75 %
N	Low=<280kg/ha	Medium=280-560 kg/ha (Best)	High =>560 kg/ha
P_2O_5	Low=<22 kg/ha	Medium 22.55 kg/ha (Best)	High=>55 kg/ha
K_2O	Low=<133 kg/ha	Medium =133-310 kg/ha (Best)	High=>310 kg/ha

ORBITEK

HAVERI
DISTRICT
DHARWAD
GADAG

Special programme

List special programmes undertaken by the KVK and operational now, which have been financed by State Govt./Other Agencies

Name of the scheme	Role of KVK	Date/ Month of initiation	Funding agency	Amount (Rs.)
Raising income and farmers's welfare	Planning, implementing & monitoring of scheme	Jan-2017	KAPC, Bengaluru	25,00,000

KAPC Project

Kisan Mobile Advisory Services

29282 Farmers are registered at KVK

Month	No. of SMS	No. Of Farmers
April	7	199997
May	10	257745
June	8	229181
July	7	200956
August	4	114970
September	3	86529
October	4	145105
November	6	174126
December	0	0
January	12	348911
February	2	58567
March	15	439272
Total	78	2255359

Whatsapp Masseges –252 Farmers



ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ –ರೈತರಿಗೆ ಕೃಷಿ ಸಂದೇಶ 3. –ದಿ: 28.04.18)

ಕಳೆನಾಶಕಗಳು ವಿಷಪೂರಿತ ಇರುವುದರಿಂದ ಮನುಷ್ಯರಿಗೆ ಹಾಗೂ ಪ್ರಾಣಿಗಳಿಗೆ ತೊಂದರೆ ಯಾಗುವುದು. ಆದ್ದರಿಂದ ಕಳೆನಾಶಕಗಳನ್ನು ಉಪಯೋಗಿಸುವಾಗ ಅನುಸರಿಸಬೇಕಾದ ಕ್ರಮಗಳು:–

ಸಿಂಪರಣೆಯ ಸಮಯದಲ್ಲಿ ಕಳೆ ನಾಶಕದಿಂದ ಕೂಡಿದ ಗಾಳಿಯನ್ನು ಸೇವಿಸಬೇಡಿ. ಸಿಂಪರಣೆಯ ನಂತರ ಕೈಗಳನ್ನು ಮತ್ತು ಮುಖವನ್ನು ಸ್ವಚ್ಛವಾಗಿ ತೊಳೆದು ಬಟ್ಟೆಯನ್ನು ಬದಲಾಯಿಸಬೇಕು.

ಕಳೆನಾಶಕಗಳನ್ನು ಉಪಯೋಗಿಸಿದ ನಂತರ ಉಳಿದ ಸಿಸೆ ಅಥವಾ ಡಬ್ಬಿಗಳನ್ನು ನಾಶಮಾಡಿ. ಇಲ್ಲವೇ ಗುಂಡಿಯಲ್ಲಿ ಹಾಕಿ ಮುಚ್ಚಿ ಆದರೆ ನೀರು ಹರಿಯುವ ಜರಂಡಿಗಳಲ್ಲಿ ಎಸೆಯಬಾರದು.

ಕಳೆನಾಶಕಗಳನ್ನು ಉಪಯೋಗಿಸುವುದಕ್ಕೆ ಮುಂಚೆ ನೀರಿನೊಡನೆ ಚೆನ್ನಾಗಿ ಬೆರೆಸಿ, ಕಳೆಗಳ ಎಲೆಯ ಭಾಗದ ಮೇಲೆಲ್ಲಾ ಸರಿಯಾಗಿ ಬೀಳುವಂತೆ ಸಿಂಪರಿಸಿರಿ ಕಳೆನಾಶಕಗಳನ್ನು ತಣ್ಣನೆ ಮತ್ತು ಒಣ ವಾತಾವರಣವಿರುವ ಪ್ರದೇಶಗಳಲ್ಲಿ ಶೇಖರಿಸಬೇಕು.

ಕಳೆಗಳು ಮೊಳಕೆ ಬಂದ ನಂತರ ಬಳಸಬಹುದಾದ ಕಳೆನಾಶಕಗಳನ್ನು ಉಪಯೋಗಿಸುವದಾದಲ್ಲಿ ಅದನ್ನು ಶುದ್ಧಮಾಡುವ ವಸ್ತುವನ್ನು (ಡಿಟರ ಜೆಂಟ್) ಅಂದರೆ ಶೇ. 0.1 ಟೀಪಾಲ್ ಮಿಶ್ರಮಾಡಿ ಉಪಯೋಗಿಸಿ ಕಳೆನಾಶಕದೊಡನೆ ಈ ವಸ್ತು ಮಿಶ್ರವಾಗಿದೆ ಎಂಬ ತಯಾರಕರ ಸೂಚನೆ ಇದ್ದಾಗ ಈ ವಸ್ತುವನ್ನು ಮಿಶ್ರ ಮಾಡುವ ಅಗತ್ಯವಿಲ್ಲ.

ಕಳೆ ನಿಯಂತ್ರಣ ರಾಸಾಯನಿಕವು ನೀರಿನಲ್ಲಿ ಬೆರೆಯುವ ಪುಡಿಯಾಗಿದ್ದಲ್ಲಿ ಮತ್ತು ಟ್ಯಾಂಕರ್ ಸಿಂಪರಣೆ ಯಂತ್ರವನ್ನು ಉಪಯೋಗಿಸುವುದಾದಲ್ಲಿ ಕಳೆಯ ಮಿಶ್ರಣವನ್ನು ಸಿಂಪರಣೆಯ ಸಮಯದಲ್ಲಿ ಸತತವಾಗಿ ಕಲುಕುತ್ತಿರಬೇಕು.

ಸಿಂಪರಕವನ್ನು ಸಿಂಪರಣೆಯ ನಂತರ ಚೆನ್ನಾಗಿ ತೊಳೆದು ಇಡಿ ಕಳೆನಾಶಕಗಳನ್ನು ಸಿಂಪರಣೆ ಮಾಡಲು ಪ್ರತ್ಯೇಕ ಸಿಂಪರಕ ಇಡುವುದು ಸೂಕ್ತ.

ಡಾ. ಅಶೋಕ ಪಿ.
ಹಿರಿಯ ವಿಜ್ಞಾನಿ ಹಾಗೂ

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ –ರೈತರಿಗೆ ಕೃಷಿ ಸಂದೇಶ 4. –ದಿ : 30.04.2018

ಮೆಣಸಿನಕಾಯಿ ಬೆಳೆಯಲ್ಲಿ ರಸ ಹೀರುವ ಕೀಟಗಳ ನಿರ್ವಹಣೆ:

- ಬಿತ್ತುವ ಪೂರ್ವದಲ್ಲಿ ಇಮಿಡಾಕ್ಲೋಪ್ರಿಡ್ ಪ್ರತಿ ಕೆ.ಜಿ. ಬೀಜಕ್ಕೆ 10 ಗ್ರಾಂ ನಂತೆ ಬಳಸಿ ಬೀಜೋಪಚಾರ ಮಾಡಬೇಕು.
- ತಡೆ ಬೆಳೆಯಾಗಿ ಹೊಲದ ಸುತ್ತಲೂ ಗೋವಿನಜೋಳ ಬಿತ್ತಬೇಕು.
- ನಾಟಿ ಮಾಡುವ ಸಮಯದಲ್ಲಿ ಪ್ರತಿ ಹೆಕ್ಟೇರಿಗೆ 250 ಕೆ.ಜಿ ಬೇವಿನ ಹಿಂಡಿ ಹಾಗೂ 2500 ಕೆ.ಜಿ. ಎರೆಹುಳು ಗೊಬ್ಬರವನ್ನು ಹಾಕುವುದು ಸೂಕ್ತ.
- ನಾಟಿ ಮಾಡಿದ 45 ದಿನಗಳ ನಂತರ ಬೇವಿನ ಮೂಲದ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ 5 ಮಿ.ಲೀ ನಂತೆ ಬೆರೆಸಿ ಸಿಂಪರಣೆ ಕೈಗೊಳ್ಳಬೇಕು.
- ನಾಟಿ ಮಾಡಿದ 60 ದಿನಗಳ ನಂತರ ಶೇ. 3ರ ಬೆಳ್ಳುಳ್ಳಿ ಮತ್ತು ಮೆಣಸಿನಕಾಯಿ ಕಷಾಯದಿಂದ ಸಿಂಪರಣೆ ಕೈಗೊಳ್ಳಬೇಕು.
- ಎಲೆ ಮುಟುರು ಲಕ್ಷಣ ಹೆಚ್ಚಾಗಿ ಕಂಡು ಬಂದಾಗ ಡೈಫೆಂಥಿಯುರಾನ್ ಪ್ರತಿ ಲೀಟರ್ ನೀರಿಗೆ 1 ಗ್ರಾಂ. ನಂತೆ ಬೆರೆಸಿ ಸಿಂಪರಣೆ ಕೈಗೊಳ್ಳಬೇಕು.

ಡಾ. ಕೆ. ಪಿ. ಗುಂಡಣ್ಣವರ
ವಿಜ್ಞಾನಿಗಳು (ಕೀಟಶಾಸ್ತ್ರ)
ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ

ದಿನಪತ್ರಿಕೆಯಲ್ಲ ಕೃಷಿ ಸಂದೇಶ ಸೇವೆ

ನಂ. 1 ಕನ್ನಡ ದಿನಪತ್ರಿಕೆ

ವಿಜಯವಾಣಿ

VIJAYAVANI HUBBALLI

5A ಶನಿವಾರ 9 ಜೂನ್ 2018 9 JUNE 2018

ಹಾವೇರಿ ಲೋಕಲ್ ಎಕ್ಸ್‌ಪ್ರೆಸ್

ಕೃಷಿ ಮಿತ್ರ

ಮುಂಗಾರು ಹಂಗಾಮು ಬಿತ್ತನೆ



ಭಾನುವಾರ 10 ಜೂನ್ 2018 10 JUNE 2018

ಹಾವೇರಿ ಲೋಕಲ್ ಎಕ್ಸ್‌ಪ್ರೆಸ್ 5

ಕೃಷಿ ಮಿತ್ರ

ಕೃಷಿ ಹೊಂಡದ ಪ್ರಯೋಜನ

11 ಜೂನ್ 2018 11 JUNE 2018

4 ಹಾವೇರಿ ಲೋಕಲ್ ಎಕ್ಸ್‌ಪ್ರೆಸ್

ಕೃಷಿ ಮಿತ್ರ

ಜಮೀನುಗಳಿಗೆ ಕೊಟ್ಟಿಗೆ ಗೊಬ್ಬರ ಬಳಕೆ ವಿಧಾನ



12 ಜೂನ್ 2018 12 JUNE 2018

4 ಹಾವೇರಿ ಲೋಕಲ್ ಎಕ್ಸ್‌ಪ್ರೆಸ್

ಕೃಷಿ ಮಿತ್ರ

ಕಿರು ಧಾನ್ಯ ಬೆಳೆಗಳಲ್ಲಿ ಬೇಸಾಯ ಕ್ರಮಗಳು

ಗುರುವಾರ 7 ಜೂನ್ 2018 7 JUNE 2018

ಹಾವೇರಿ ಲೋಕಲ್ ಎಕ್ಸ್‌ಪ್ರೆಸ್ 5

ಕೃಷಿ ಮಿತ್ರ

ಮಳೆಯಾಶ್ರಿತ ಗೋವಿನಜೋಳದಲ್ಲಿ ಬೆಳೆ ನಿರ್ವಹಣೆ



ಶುಕ್ರವಾರ 8 ಜೂನ್ 2018 8 JUNE 2018

4 ಹಾವೇರಿ ಲೋಕಲ್ ಎಕ್ಸ್‌ಪ್ರೆಸ್

ಕೃಷಿ ಮಿತ್ರ

ಹಸಿರೆಲೆ ಗೊಬ್ಬರ ಬಳಕೆ, ಉಪಯೋಗ

Infrastructure in KVK

Arial view KVK, Haveri



Total Area : 7 ha

Uncultivable land : 0.4 ha

Instructional Farm:

Paddy : 3.85 ha

Arecanut : 0.8 ha

Demo units & Buildings : 0.8 ha

(Vermicompost+Fodder +Azolla + Dairy)

(Administrative Bldg + SWTL + Farmers Hostel)

Orchard : 1.15 ha

(Sapota + Cashew)

KVK Land utilization Map



Monthly Rainfall (mm) recorded at Krishi Vigyan Kendra, Hanumanamatti for 2015,2016 ,2017,2018 and 2019 compared with average of 21 years

Month	Mean of 21 Years (1990-2011)	2015	2016	2017	2018	2019
January	1.15	0.0	0.0	0.0	0.0	0.0
February	1.50	0.0	0.0	0.0	0.0	0.0
March	4.33	0.2	0.0	0.0	40.0	1.10
April	26.11	5.4	1.8	41.6	72.8	3.95
May	34.21	92.4	50.4	85.4	93.6	7.52 (as on 11 th)
June	35.84	146.8	76.5	9.0	78.9	
July	46.10	57.0	39.8	79.6	80.4	
August	38.13	54.1	22.4	21.0	97.5	
September	35.28	73.7	43.8	115.4	84.6	
October	55.60	144.6	2.2	214.6	93.4	
November	28.80	0.0	4.6	0.0	15.2	
December	1.90	0.0	0.0	0.0	0.0	
Total	308.95	574.2	241.5	566.6	656.4	

KVK Land utilization Map



Nutrients status of Soil of KVK, Hanumanamatti



Land use details of KVK Farm

Name of the crop	Date of sowing	Date of harvest	Area (ha)	Details of production			Amount (Rs.)		Remarks
				Variety	Type of Produce	Qty (kg).	Cost of inputs	Gross income	
Cereals									
Foxtail millet	27.06.18	01.10.18	0.8	Dhft-109-3	TL	1200 kg	12,000	57600	-
Little millet	29.06.18	-	0.8	Dhlm-36-3	TL	0.0	11,000	-	Crop failure due moisture stress
Barnyard millet	08.07.18	-	1.2	Local	-	600	4,500	28800	
Rabi Sorghum	17.10.18	17.01.19	0.8	SPV-2217	TL	300	4,500	12600	-
Pulses									
Redgram	24.07.18	30.01.19	1.2	BSMR-736	TL	70 0	12,000	46200	-
Horse gram	03.10.18	03.02.19	0.2	GPM-6	TL	30	1,000	2700-	-
Sunhemp	01.08.18	-	2.2	Local	TL	700	6000	56000	

Name of the crop	Date of sowing	Date of harvest	Area (ha)	Details of production			Amount (Rs.)		Remarks
				Variety	Type of Produce	Qty.	Cost of inputs	Gross income	
Oil seeds									
Castor	01.08.18	05.02.19	0.4	GC-3	TL	100 kg	4,500	9,500	-
Spices & Plantation crops									
Curry Leaf	-	-	-	Suvasini	Seedlings	1123	8000	16850	-
Tamarind	-	-	-	Local	Seedlings	19Nos	200	760	-
Tamarind Fruit Auction Sale	-	-	0.4	Local	Fruit		15,000	55000	-
Fruits									
Sapota	-	-	-	DHS-1 &2	Seedlings	209Nos	3000	10750	-
Guava	-	-	-	L-49	Seedlings	71 Nos	500	2840	-
Sapota Fruit Auction Sale	-	-	2.0	DHS-2	Fruit		8,000	15,000	-

Sale of seeds

Name of the crop	Variety	Quantity of seed (q)	Amount (Rs)	No. of farmers
Foxtail millet	Dhft-109-03	3.8	17480	12
Horsegram	GBM-6	0.30	1350	2
Jowar rabi	Spv-2217	2.0	9200	12
Pigeonpea	BSMR-736	1.2	10680	18
Prosomillet	DHPM-2769	0.2	1100	1
Castor	GC-3	1.0	9500	4
Barnyard millet	DHB-93-2	6.0	33000	29
		45.5	82310	78

Sapota DHS-1 & DHS-2 Grafting

Guava L- 49 Air Layering

Sale of seedlings

Crop	Variety	Hybrid	Quantity (No.)	Amount(Rs.)	No. of farmers
Curry leaf	Local	-			
Curry leaf	Suvasini	-	1123	16845	23
Guava	L-49	-	71	2840	3
Sapota	-	DHS-1 &2	209	10450	12
Tamarind	Local	-	19	760	1
		Total	1422	30895	44

Fruit auction sale

Crop	Variety	Hybrid	Amount(Rs.)
Sapota	-	DHS-2	15000
Tamarind	Local	-	55000
		Total	65000

KVK, Farm Seed Production Activities

Redgram Var : BSMR-736

Horse gram Var: GPM-6

Fodder sorghum COFS - 29

Hybrid Napier Var: DHN-6

Sapota Var: Kalipati + Sunhemp Var : Local

Castor Var : GC-3

Sapota mother plant orchard

Sun hemp : Local

Threshing yard

Transplanted Redgram : BSMR-736

Sapota DHS-1 & DHS-2 Grafting

Guava L- 49 Air Layering

Trichoderma preparation

Soil sample preparation

Soil testing and Trichoderma production Lab

D.E , UASD, visited to soil lab

Hon’ble MLA, Byadagi, visited to soil lab

Trichoderma production & Sale

Month	Qty. (kg)	Amount (Rs)	Farmers Benefited
April	22	2860	2
May	10	1300	4
June	14	1820	8
July	33	4290	3
August	20	2600	1
September	07	910	5
October	0	0	0
November	0	0	0
December	140	18200	6
January	0	0	0
February	30	3900	4
March	50	6500	2
Total	326	42380	46

KVK Dairy and Sheep

Cattle	Bred	Total
Cow	DHF	8
Heifer (< 3 yrs)	DHF	2
Female calves (< 1 & half yrs)	DHF	9
Male calves (< 1 & half yrs)	DHF	3
Bull (4 yrs)	DHF	0
Bullock	Hallikar	2
	Total	24

Milk yield 2018-19	
Liters	Amount (Rs)
23388.5	5,52,727/-

Sheep & Ram	No.s
Deccani sheep (> 3 yrs)	08
Deccani Ram (> 3 yrs)	01
Rambulet Ram (> 3 yrs)	01
Lamb Deccani (F) (6 months to 1 yr)	10
Lamb Deccani (M) (6 months to 1 yr)	08
Rambulet (M) (6 months)	02
Rambulet (F) (6 months)	03
Total	33

Fodder cafeteria and Vermicompost Unit at KVK farm

Database Management

S. No	Database target	Database created
1	Training Database	On going
2	Seeds and Planting Material Database	On going
3	Frontline Demonstrations Database	On going
4	Technologies assessed and Refined	On going
5	KMAS details	On going
6	Soil Analysis Data Base	On going
7	Water Analysis Data Base	On going
8	KVK Inventory of Assets	On going
9	Extension Programmes	On going
10	KVK Publication	On going
11	Resource inventory of the District	Under progress
12	Farmers Database	Under Progress
13	KVK Accounts Database	Under progress
14	Technology Inventory for the District	Under progress

Budget
Utilization & Estimation

Utilization of KVK funds during the year 2018-19

Sl.No.	Particulars	Sanctioned	Released	Expenditure
21.1	(A). REVENUE (Recurring Contingencies)	0	0	0
21.1.1	Pay & Allowances	92.08	92.08	60.66
21.1.2	Traveling allowances	1.50	1.50	1.05
21.1.3	Contingencies	0	0	0
21.1.3.a	Stationery, telephone, postage and other expenditure on office running, publication of Newsletter	2.30	2.30	2.01
21.1.3.b	POL, repair of vehicles, tractor and equipments	2.20	2.20	2.01
21.1.3.c	Food/refreshment for farmers/extension personnel @ Rs.150/person/day	0.75	0.75	0.67
21.1.3.d	Training material (need based materials and equipments for conducting the training)	1.00	1.00	0.91
21.1.3.e	Frontline demonstrations	2.75	2.75	2.58
21.1.3.f	On farm testing (OFTs)/Technology Assessment	0.45	0.45	0.35
21.1.3.g	Integrated Farming System (IFS) (Min. 5 Units)	0	0	0
21.1.3.h	Training of extension functionaries	0.15	0.15	0.06
21.1.3.i	Extension activities/services	0.50	0.50	0.49
21.1.3.j	Farmers' Field School	0	0	0
21.1.3.k	EDP (2 Nos.) / Innovative activities	0.30	0.30	0.29
21.1.3.l	Soil & water testing & issue of soil health cards	0.10	0.10	0.04
21.1.3.m	Maintenance of building	0.50	0.50	0.50
21.1.3.n	Farmers Conclave, KVK Conference	0	0	0
21.1.3.o	Video production	0	0	0
21.1.3.p	Library (Purchase of Journals, Periodicals, News Papers& Magazines)	0	0	0
	Total Recurring	0	0	0
21.2	(B). CAPITAL (Non-Recurring Contingencies)	0	0	0
21.2.1	Equipments& Furniture	0	0	0
21.2.2	Works	0	0	0
21.2.3	Vehicle	0	0	0
21.2.3 a	Four wheeler (replacement)	0	0	0
21.2.4	Library	0	0	0
	TotalNon Recurring	0	0	0
21.3	(C). REVOLVING FUND	0	0	0
	GRAND TOTAL (A+B+C)	**104.58**	**104.58**	**71.62**

Status of Revolving Fund

(Rs in lakh)

Year	Opening balance as on 1st April	Income during the year	Expenditure during the year	Net balance in hand as on 1st April of subsequent year
ICAR				
April 2016 to March 2017	7.93	15.80	16.32	7.41
April 2017 to March 2018	7.70	7.65	8.47	3.61
April 2018 to March 2019	3.61	11.73	13.35	4.49*

*Rs. 2.5 lakh is the value of stock in hand

Thank you